B.L.D.E Association's

# S.B.ARTS AND K.C.P SCIENCE, VIJAYAPUR

## DEPARTMENT OF KANNADA

## ADVANCELEARNERS- B.A. V$^{th}$ SEMISTER 2016-17

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ,

IQAC, Co-ordinator
S.B.Arts & K.C.P Science College,

Principal,
S.B. Arts and KCP Science College
VIJAYAPUR

# Department Of Kannada

## Topic Of the Assignment/ Project Work

## B.A. $V^{th}$ SEMISTER

## ADVANCELEARNERS List -2016-17

| Sl. No | Name Of The Student | Roll.No | Topic Of the Assignment/ Project Work |
|---|---|---|---|
| 1 | Mahesh Babaleshvar and Hanamant Metri | A.1446865,A1446845 | Haridas Saahitya |
| 2 | Priyadarshini Biradar and Raajashree Nandyala | A.1446896,A1446902 | Paashimatya Kannada Sanshodhakaru |
| 3 | Gururaj Bommanahalli | A1350548 | Saamaajika BadalaavaNeyalli saahityada Paatra |
| 4 | Pratibha Aramani | A1446891 | Da.Ra.Bendre Avara jeevana mattu krutigaLu |
| 5 | Aashaarani Koli | A1446855 | Ratnatrayaru |
| 6 | Bharati Jaadhava and Shivaleela Maali | A1446834,A1446945 | Keertanakaararu |
| 7 | KavitaSarataape, Kavita Bairagonda, Sujata Naatikaar | A135068,A135067,A1350656 | Jnayanapeeta Prashasti Vijetaru |
| 8 | Kaashibaayi Masuti, Siddamma Naadagouda | A1446853,A1442485 | Vacana Saahitya |

For

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಾಪುರ

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

ಬಿ ಎಲ್ ಡಿ ಈ ಸಂಸ್ಥೆ

**ಎಸ್ ಬಿ ಕಲಾ ಮತ್ತು ಕೆ ಸಿ ಪಿ ವಿಜ್ಞಾನ ಮಹಾವಿದ್ಯಾಲಯ**

**ವಿಜಯಪುರ**

ಯೋಜನೆ ಮಾಹಿತಿ

## ಜ್ಞಾನ ಪೀಠ ಪ್ರಶಸ್ತಿ ವಿಜೇತರು

ಕನ್ನಡ ವಿಭಾಗ ಮಾರ್ಗದರ್ಶಕರು

**ಡಾ॥ ಎಸ್ ಪಿ ಮದ್ರೇಕರ**

| ವಿದ್ಯಾರ್ಥಿನಿಯ ಹೆಸರು | ನೋಂದಣಿ ಸಂಖ್ಯೆ |
|---|---|
| ಕವಿತಾ ಸರತಾಪೆ | :ಎ1350568 |
| ಕವಿತಾ ಭೈರಗೋಂಡ | :ಎ1350567 |
| ಸುಜಾತಾ ನಾಟಿಕಾರ | :ಎ1350656 |

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ


IQAC, Co-ordinator
S.B.Arts & K.C.P.Science College
Vijayapur.

Principal,
S.B. Arts and KCP Science
VIJAYAPUR

Scanned with CamScanner

# ಜ್ಞಾನ ಪೀಠ ಪ್ರಶಸ್ತಿ ವಿಜೇತರು

## 1. ಕುವೆಂಪು - ಕುಪ್ಪಳಿ



**ಕುವೆಂಪು** - ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ (ಡಿಸೆಂಬರ್ ೨೯, ೧೯೦೪ - ನವೆಂಬರ್ ೧೧, ೧೯೯೪) - ಕನ್ನಡವು ಪಡೆದ ಅತ್ಯುತ್ತಮ ಕವಿಗಳಲ್ಲೊಬ್ಬರು, ಎರಡನೆ **ರಾಷ್ಟ್ರಕವಿ**. ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ ಕನ್ನಡದ ಪ್ರಪ್ರಥಮ ವ್ಯಕ್ತಿ. 'ವಿಶ್ವ ಮಾನವ' ಪರಿಕಲ್ಪನೆಯನ್ನೂ ಸಾಹಿತ್ಯದ ಮೂಲಕ ಸಮಾಜಕ್ಕೆ ತಲುಪಿಸಿದವರು. ಕನ್ನಡ ಸಾಹಿತ್ಯಕ್ಕೆ ಇವರ ಕಾಣಿಕೆ ಅಪಾರ. ಕುವೆಂಪುರವರ ಮೊದಲ ಕಾವ್ಯನಾಮ-"ಕಿಶೋರ ಚಂದ್ರವಾಣಿ" -ನಂತರ ಅವರು ಕುವೆಂಪು ಕಾವ್ಯನಾಮ ಬಳಸಿ ಬರೆಯತೊಡಗಿದರು. ಡಿಸೆಂಬರ್ ೨೯, ೧೯೦೪, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಹಿರೇಕೊಡಿಗೆಯಲ್ಲಿ ಜನಿಸಿದ ಇವರು, ಕುಪ್ಪಳಿ (ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು) ಹಾಗೂ ಮೈಸೂರಿನಲ್ಲಿ ಪರಪುಟ್ಟ ಹಕ್ಕಿಯಂತೆ ಬೆಳೆದರು. ಮೈಸೂರಿನ 'ಮಹಾರಾಜಾ' ಕಾಲೇಜಿನಲ್ಲಿ ಓದಿದ ಇವರು, ಮೈಸೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ಉಪ ಕುಲಪತಿಯಾಗಿ ನಿವೃತ್ತರಾದರು. ಇವರು ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ "ಉದಯರವಿ"ಯಲ್ಲಿ ವಾಸಿಸುತ್ತಿದ್ದರು. ಇವರ ಪತ್ನಿ ಹೇಮಾವತಿ ಮತ್ತು ಇವರಿಗೆ ನಾಲ್ಕು ಜನ ಮಕ್ಕಳು(ಪೂರ್ಣಚಂದ್ರ ತೇಜಸ್ವಿ, ಕೋಕಿಲೋದಯ ಚೈತ್ರ, ಇಂದುಕಲಾ, ತಾರಿಣಿ ಚಿದಾನಂದ)

## ವಿಶ್ವ ಮಾನವ ದಿನ

ಕರ್ನಾಟಕ ಸರ್ಕಾರವು ೨೦೧೫ರ ಡಿಸೆಂಬರ್‌ನಲ್ಲಿ ಕುವೆಂಪು ಜನ್ಮದಿನವಾದ ಡಿಸೆಂಬರ್ ೨೯ ಅನ್ನು "ವಿಶ್ವ ಮಾನವ" ದಿನವನ್ನಾಗಿ ಆಚರಿಸುವುದಾಗಿ ಆದೇಶ ಹೊರಡಿಸಿತು. ಈ ಮೂಲಕ ವಿಶ್ವಮಾನವ ಸಂದೇಶ ಸಾರಿದ ಕವಿಗೆ ಮತ್ತೊಂದು ಗೌರವ ಸಂದಾಯವಾದಂತಾಯಿತು.

ಮುಖ್ಯಸ್ಥರು,
ಕನ್ನಡ ವಿಭಾಗ,

Principal,
S.B. Arts and KCP Science College
VIJAYAPUR

IQAC, Co-ordinator
S.B.Arts & K.C.P Science College,



Scanned with CamScanner

## ಸಾರಸ್ವತ ಲೋಕದ ಪ್ರತಿಕ್ರಿಯೆಗಳು

ಕುವೆಂಪು ಅವರು ಸಾಹಿತ್ಯ ಬೃಹನ್ಮೂರ್ತಿ; ಕಾವ್ಯಮೀಮಾಂಸೆಯ ಯಾವೊಂದು ಸರಳ ಸೂತ್ರವೂ ಅವರನ್ನು ಸಂಪೂರ್ಣವಾಗಿ ವಿವರಿಸಲಾರದು - ಏಕೆಂದರೆ, ಅವರ ಕೃತಿಗಳು ನಗ್ನ ಸತ್ಯವನ್ನೆಂತೂ ಅಂತೇ ಅತೀತ ಸತ್ಯವನ್ನೂ ಅನಾವರಣ ಗೊಳಿಸುತ್ತವೆ. ಸೃಜನಾತ್ಮಕ ಜೀವನಚರಿತ್ರೆ, ಸಾಹಿತ್ಯ ವಿಮರ್ಶೆ, ಕಾವ್ಯಮೀಮಾಂಸೆ, ನಾಟಕ ಮತ್ತು ಕತೆ ಕಾದಂಬರಿಯ ಕ್ಷೇತ್ರಗಳಿಗೆ ಪುಟ್ಟಪ್ಪನವರ ಕೊಡುಗೆ ಸ್ಮರಣೀಯವಾದುದು. ಅವರದು ವ್ಯಕ್ತಿ ವಾಣಿಯಲ್ಲ; ಯುಗಧರ್ಮ, ಜನಾಂಗ ಧರ್ಮಗಳ ವಾಣಿ. ಅವರು ಬಹುಕಾಲ ತಮ್ಮ ಸಾಹಿತ್ಯದ ಮೂಲಕ ಚಿರಂಜೀವಿಯಾಗಿಇರುತ್ತಾರೆ.

### ಬಿ.ಎಂ.ಶ್ರೀ.

ನೂರು ದೋಷಗಳಿದ್ದರೂ ಕಾವ್ಯವು ಕಾವ್ಯವೇ. ಒಂದು ತಪ್ಪಿಲ್ಲದಿದ್ದರೂ ಜೀವವಿಲ್ಲದ ಕಾವ್ಯ ಕಾವ್ಯವೇ ಅಲ್ಲ. ಪುಟ್ಟಪ್ಪನವರ ಉತ್ತಮ ಕವನಗಳಲ್ಲಿ ಈ ಜೀವವಿದೆ; ಇರುವುದರಿಂದಲೇ ಅವುಗಳಲ್ಲಿ ಅಮೃತತ್ವದ ಸಾರವಿದೆ.

### ದ.ರಾ.ಬೇಂದ್ರೆ

- ಯುಗದ ಕವಿಗೆ
- ಜಗದ ಕವಿಗೆ
- ಶ್ರೀ ರಾಮಾಯಣ ದರ್ಶನದಿಂದಲೇ ಕೈ
- ಮುಗಿದ ಕವಿಗೆ – ಮಣಿಯದವರು ಯಾರು?
- ರಾಮಕೃಷ್ಣ ವಚನೋದಿತ ಪ್ರತಿಭೆ ತೆರೆದ
- ಕವನ ತತಿಗೆ ತಣಿಯದವರು ಆರು?
- ಮಲೆನಾಡಿನ ಸೌಂದರ್ಯಕೆ ಕುಣಿದಾಡಿದ
- ಕವಿಯ ಜತೆಗೆ ಕುಣಿಯದವರು ಆರು?
- ಕನ್ನಡಿಸಲಿ ಶಿವ ಜೀವನ
- ಮುನ್ನಡೆಸಲಿ ಯುವ-ಜನ-ಮನ
- ಇದೆ ಪ್ರಾರ್ಥನೆ ನಮಗೆ
- ತಮವೆಲ್ಲಿದೆ ರವಿಯಿದಿರಿಗೆ?
- ಉತ್ತಮ ಕವಿ ನುಡಿ – ಚದುರಗೆ
- ಚಾರುತ್ವದ ಕುಂದಣದಲಿ
- ಚಾರಿತ್ರ್ಯದ ರತ್ನ
- ಚಾತುರ್ಯದ ಮಂತಣದಲಿ
- ಸತ್ಸಂಗದ ಯತ್ನ
- ಇದೆ ತೃಪ್ತಿಯು ನಿಮಗೆ



Scanned with CamScanner

### ಕೀರ್ತಿನಾಥ ಕುರ್ತಕೋಟಿ

ಕುವೆಂಪು ಈ ತಲೆಮಾರಿನ ಹಿರಿಯ ಕವಿಗಳಲ್ಲೊಬ್ಬರಾಗಿದ್ದಾರೆ. ರಚನಾ ಕ್ರಮದಲ್ಲಿ ದೋಷಗಳನ್ನು ತೋರಿಸಬಹುದಾದರೂ ಅವರ ಕಾವ್ಯಶಕ್ತಿ ಸಹಜವಾದದ್ದು. ಅದು ಮುಖ್ಯವಾಗಿ 'ರೊಮ್ಯಾಂಟಿಕ್' ಜಾತಿಯ ಪ್ರತಿಭೆಯಾಗಿದ್ದರಿಂದ ಭಾವಾವೇಶ ಅಲ್ಲಿ ಅನಿವಾರ್ಯವಾಗುತ್ತದೆ. ಆದರೆ ಕುವೆಂಪು ರವರ ಕಾವ್ಯದ ಶ್ರೇಷ್ಠತೆಯಿರುವುದು ಅದು ಸಮಕಾಲೀನ ಜೀವನದ ಎಲ್ಲ ಅಂಶಗಳಿಗೂ ಪ್ರತಿಸ್ಪರ್ಧಿಯಾಯಿತೆಂಬುದೇ. ನಿಸರ್ಗದ ಚೆಲುವು, ದೇಶ ಪ್ರೇಮ, ಆದರ್ಶಪ್ರಿಯತೆ, ಕ್ರಾಂತಿಯ ವೀರಭಾವ, ಆಧ್ಯಾತ್ಮಿಕತೆ ವೊದಲಾದ ಎಲ್ಲ ವಿಷಯಗಳಿಗೂ ಅವರ ಕಾವ್ಯ ಇಂಬುಕೊಟ್ಟಿದೆ.

### ಕೋ.ಚೆನ್ನಬಸಪ್ಪ

ಮೊದಲಿನಿಂದಲೂ ಪುಟ್ಟಪ್ಪನವರ ಪ್ರಮುಖ ಪ್ರವೃತ್ತಿ, ಪ್ರಥಮ ಆಸಕ್ತಿ ಅಧ್ಯಾತ್ಮ. ಅವರು ಜನ್ಮ ತಾಳಿದ್ದು ಇತರ ಕೋಟ್ಯಂತರ ಜನರಂತೆ ಸುಮ್ಮನೆ ಬದುಕಿ, ಬಾಳಿ ಹೋಗಲಿಕ್ಕಲ್ಲ ಎಂಬ ಆತ್ಮ ಪ್ರತ್ಯಯ - ಆತ್ಮಜ್ಞಾನ - ಪುಟ್ಟಪ್ಪನವರಿಗೆ ಚಿಕ್ಕಂದಿನಿಂದಲೇ ಉಂಟಾಗಿತ್ತು. ಆದ್ದರಿಂದ ಮಾನವ ಜನ್ಮೋದ್ದೇಶವಾದ ಆತ್ಮಸಾಕ್ಷಾತ್ಕಾರವೇ ಅವರ ಬಾಳ ಗುರಿ; ಜೀವನೋದ್ದೇಶದ ಆದಿ ಅಂತ್ಯ. ಅವರಿಗೆ ಜೀವನದಲ್ಲಿ ಮತ್ತಾವ ಉಪಾಧಿಗಳೂ ಇರಲಿಲ್ಲ. ಇಂಥ ಅವರ ಜೀವನೋದ್ದೇಶಕ್ಕೆ ನೆರವಾದುದು ಅವರ ಕಾವ್ಯಶಕ್ತಿ. ಅದನ್ನವರು ಎಂದೂ ಮರೆಮಾಚಿಲ್ಲ. ಆದರೂ ಕನ್ನಡ, ಕರ್ನಾಟಕ ಅವರ ಜೀವದ ಎರಡು ಶ್ವಾಸಕೋಶಗಳು. ಆ ಶ್ವಾಸಕೋಶಗಳ ಚಲನೆ ನಿಂತರೆ ಅವರ ಬಾಳುಸಿರೇ ನಿಂತಂತೆ.

### ಕೆ. ಸಚ್ಚಿದಾನಂದನ್

ಕುವೆಂಪು ಕೇವಲ ಕರ್ನಾಟಕದವರಲ್ಲ, ಭಾರತದ ಮಹಾ ಲೇಖಕ. ಅವರ 'ರಾಮಾಯಣ ದರ್ಶನಂ' ಆಧುನಿಕ ಭಾರತೀಯ ಸಾಹಿತ್ಯದ ಶ್ರೇಷ್ಠ ಕೃತಿ. ಇಲ್ಲಿ ಬರುವ ರಾಮ, ಸೀತೆ ಯೊಂದಿಗೆ ಅಗ್ನಿ ಪ್ರವೇಶ ಮಾಡುತ್ತಾನೆ. ಎಲ್ಲೆಡೆ ಮಹಿಳೆಯ ಮೇಲೆ ದೌರ್ಜನ್ಯ, ಹಿಂಸೆಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ ಕುವೆಂಪು ಕಟ್ಟಿಕೊಟ್ಟ ಈ ಚಿತ್ರಣ ಪ್ರಸ್ತುತ ಮತ್ತು ಆದರ್ಶ. ಅವರ ಶೂದ್ರ ತಪಸ್ವಿ ನಾಟಕ, ಶೋಷಣೆ ಮತ್ತು ತಾರತಮ್ಯದ ವರ್ಣ ನೀತಿಗೆ ಮುಖಾಮುಖಿಯಾದ ನಾಟಕ. ಸಾರ್ವಕಾಲಿಕ ಕಾವ್ಯ ಮೀಮಾಂಸೆಯ ಅಧ್ವರ್ಯುಗಳಲ್ಲಿ ಕುವೆಂಪು ಒಬ್ಬರು. ತಾವು ನಂಬಿದ ಕಾವ್ಯ ತತ್ವವನ್ನು ತಮ್ಮ 'ರಸೋ ವೈ ಸಃ'ದಲ್ಲಿ ಹೇಳಿದ್ದಾರೆ. ಕನ್ನಡಕ್ಕೆ ಹೊಸ ನುಡಿಗಟ್ಟು ಮತ್ತು ಹೊಸ ಕಲ್ಪನೆಗಳನ್ನು ನೀಡಿದವರು. ಕಲ್ಪನಾಶಕ್ತಿಯೊಂದಿಗೆ, ಬೌದ್ಧಿಕ ಸಾಮರ್ಥ್ಯವನ್ನು ಮೇಳೈಸಿ, ನೈತಿಕ ಮತ್ತು ಸೌಂದರ್ಯ ಮೀಮಾಂಸೆಯನ್ನು ಉನ್ನತ ಸ್ಥಾನಕ್ಕೆ ಒಯ್ದವರು.

Scanned with CamScanner

## 2. ದ ರಾ ಬೇಂದ್ರೆ



ದ.ರಾ.ಬೇಂದ್ರೆ

ಕುಣಿಯೋಣು ಬಾರಾ ಕುಣಿಯೋಣು ಬಾ", "ಇಳಿದು ಬಾ ತಾಯಿ ಇಳಿದು ಬಾ", "ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು", ಎಂದು ಆರಂಭವಾಗುವ ಕವಿತೆಗಳನ್ನು ಕೇಳದ ಕನ್ನಡಿಗನಿಲ್ಲ. ಉತ್ಸಾಹದ ಚಿಲುಮೆಯನ್ನುಕ್ಕಿಸಬಲ್ಲ, ನೊಂದ ಜೀವಕ್ಕೆ ಸಾಂತ್ವನ ನೀಡಬಲ್ಲ, ಪ್ರೀತಿ ಪ್ರೇಮಗಳನ್ನು ಮೂಡಿಸಬಲ್ಲ ಕವಿತೆಗಳನ್ನು ರಚಿಸಿಕೊಟ್ಟ ವರಕವಿ ಬೇಂದ್ರೆ. ರಸವೆ ಜನನ, ವಿರಸವೆ ಮರಣ, ಸಮರಸವೆ ಜೀವನ ಎಂದು ಜೀವನವನ್ನು ಕುರಿತು ಪರಿಣಾಮಕಾರಿಯಾಗಿ ಹೇಳಿದ ಧೀಮಂತ ಕವಿ. ಬೇಂದ್ರೆಯವರ ಕುರಿತೊಂದು [೧] ಸಾಕ್ಷ್ಯಚಿತ್ರ ತಯಾರಾಗಿತ್ತು.

**ಜೀವನ** ಬೇಂದ್ರೆ ೧೮೯೬ನೆಯ ಇಸವಿ ಜನವರಿ ೩೧ ರಂದು ಜನಿಸಿದರು. ತಂದೆ ರಾಮಚಂದ್ರ ಭಟ್ಟ, ತಾಯಿ ಅಂಬಿಕೆ(ಅಂಬವ್ವ). ಬೇಂದ್ರೆಯವರ ಕಾವ್ಯನಾಮ ಅಂಬಿಕಾತನಯದತ್ತ. ಬೇಂದ್ರೆ ಮನೆತನದ ಮೂಲ ಹೆಸರು ಠೋಸರ. ವೈದಿಕ ವೃತ್ತಿಯ ಕುಟುಂಬ. ಒಂದು ಕಾಲಕ್ಕೆ ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದ ಗದಗ ಪಟ್ಟಣದ ಸಮೀಪದ ಶಿರಹಟ್ಟಿಯಲ್ಲಿ ಬಂದು ನೆಲೆಸಿದರು. ದ.ರಾ.ಬೇಂದ್ರೆ ಹನ್ನೊಂದು ವರ್ಷದವರಿದ್ದಾಗ ಅವರ ತಂದೆ ತೀರಿಕೊಂಡರು. ೧೯೧೩ರಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿದ ಬಳಿಕ ಬೇಂದ್ರೆ ಪುಣೆಯ ಕಾಲೇಜಿನಲ್ಲಿ ಓದಿ ೧೯೧೮ರಲ್ಲಿ ಬಿ.ಎ. ಮಾಡಿಕೊಂಡರು. ಹಿಡಿದದ್ದು ಅಧ್ಯಾಪಕ ವೃತ್ತಿ. ೧೯೩೫ರಲ್ಲಿ ಎಂ.ಎ. ಮಾಡಿಕೊಂಡು ಕೆಲಕಾಲ (೧೯೪೪ - ೧೯೫೬) ಸೊಲ್ಲಾಪುರದ ಡಿ.ಎ.ವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಬೇಂದ್ರೆಯವರು ೧೯೧೯ರಂದು ಹುಬ್ಬಳ್ಳಿಯಲ್ಲಿ ಲಕ್ಷ್ಮೀಬಾಯಿಯವರನ್ನು ವಿವಾಹವಾದರು; ಅವರ ಪ್ರಥಮ ಕಾವ್ಯ ಸಂಕಲನ "ಕೃಷ್ಣ ಕುಮಾರಿ"-ಯು ಆಗಲೇ ಪ್ರಕಟಿಸಲ್ಪಟ್ಟಿತ್ತು.

- ಕವಿ, ದಾರ್ಶನಿಕ ಬೇಂದ್ರೆ ಈ ಯುಗದ ಒಬ್ಬ ಮಹಾಕವಿ. ೧೯೮೧ರ ಅಕ್ಟೋಬರ್‌ನಲ್ಲಿ ತೀರಿಕೊಂಡ ಅವರು ಕವಿಗಳಿಗೆ, ಸಾಹಿತಿಗಳಿಗೆ ಸ್ಫೂರ್ತಿಯ ಸೆಲೆ. ಎಲ್ಲಾ ಕಾಲಕ್ಕೂ ಬಾಳುವಂತಹ ಕವನಗಳನ್ನು ರಚಿಸಿದ ಕೀರ್ತಿ ಅವರದು. ನಾಡಿನ ತುಂಬೆಲ್ಲಾ ನಡೆದಾಡಿದ ಅವರಲ್ಲಿರುವಂತ ಪ್ರತಿಯೊಂದು ಸಾಹಿತ್ಯದ ನುಡಿಗಳು ಮಾನವನ ನಾಡಿ ಮಿಡಿತದಂತೆ ಹರಿದಾಡಿ ಇಡೀ ಕನ್ನಡ ಸಾಹಿತ್ಯ ರಂಗವನ್ನ ಶ್ರೀಮಂತಗೊಳಿಸಿವೆ ಎಂದರೆ ತಪ್ಪಲಾಗಲಾರದು.

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ ವಿಜಯಪುರ
Principal,
S.B. Arts and KCP Science College
VIJAYAPUR
ಬಿ ಕಲಾ ಮತ್ತು ಕೆ ಸಿ ಪಿ ವಿಜ್ಞಾನ ಮಹಾ ವಿದ್ಯಾಲಯ ವಿಜಯಪುರ
IQAC, Co-ordinator
S.B.Arts & K.C.P.Science College,
Vijayapur.



Scanned with CamScanner

**ಸಾಹಿತ್ಯ** ಸಾಹಿತ್ಯ ರಚನೆ ಅವರ ಮೊದಲ ಒಲವು. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಕವಿತೆಗಳನ್ನು ಕಟ್ಟಿದರು. ೧೯೧೮ರಲ್ಲಿ ಅವರ ಮೊದಲ ಕವನ "ಪ್ರಭಾತ" ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಅಲ್ಲಿಂದಾಚೆಗೆ ಅವರು ಕಾವ್ಯ ರಚನೆ ಮಾಡುತ್ತಲೇ ಬಂದರು. "ಗರಿ", "ಕಾಮಕಸ್ತೂರಿ ", "ಸೂರ್ಯಪಾನ", "ನಾದಲೀಲೆ", "ನಾಕುತಂತಿ" ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದರು. ಇವರ ನಾಕುತಂತಿ ಕೃತಿಗೆ ೧೯೭೪ ಇಸವಿಯ ಕೇಂದ್ರ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಕವಿತೆಗಳನ್ನಲ್ಲದೆ ನಾಟಕಗಳು, ಸಂಶೋಧನಾತ್ಮಕ ಲೇಖನಗಳು, ವಿಮರ್ಶೆಗಳನ್ನು ಬೇಂದ್ರೆ ಬರೆದಿದ್ದಾರೆ. ೧೯೨೧ರಲ್ಲಿ ಧಾರವಾಡದಲ್ಲಿ ಅವರು ಗೆಳೆಯರೊಡನೆ ಕಟ್ಟಿದ "ಗೆಳೆಯರ ಗುಂಪು" ಸಂಸ್ಥೆ ಅವರ ಸಾಹಿತ್ಯ ಚಟುವಟಿಕೆಗಳಿಗೆ ಇಂಬು ನೀಡಿತು.

- ಆಗಿನ್ನೂ ಸ್ವಾತಂತ್ರ್ಯ ಚಳುವಳಿ ಬಿಸಿ ಏರಿದ್ದ ಸಮಯ. ಬೇಂದ್ರೆ ಯವರ "ಗರಿ" ಕವನ ಸಂಕಲನದಲ್ಲಿನ "ನರಬಲಿ" ಎಂಬ ಕವನವು ಆಗಿನ ಬ್ರಿಟಿಷ್ ಸರ್ಕಾರದ ಕೋಪಕ್ಕೆ ಕಾರಣವಾಯಿತು. ದೇಶಪ್ರೇಮಿಗಳೂ, ದೇಶಭಕ್ತರೂ ಆಗಿದ್ದ ಬೇಂದ್ರೆ ತಾವೂ ಚಳುವಳಿಯಲ್ಲಿ ಭಾಗವಹಿಸಿ ಕೆಲಕಾಲ ಸೆರೆಮನೆವಾಸ ಅನುಭವಿಸಿದರು. ಅವರು 1954ನೇ ಇಸವಿಯಲ್ಲಿ ತಯಾರಾದ ವಿಚಿತ್ರ ಪ್ರಪಂಚ ಎಂಬ ಚಿತ್ರಕ್ಕೆ ಸಾಹಿತ್ಯ ಹಾಗೂ ಗೀತೆಗಳನ್ನು ರಚಿಸಿದ್ದರೆಂದು ಆ ವರ್ಷದ ನವಂಬರ್ ತಿಂಗಳ ಚಂದಮಾಮ ಪತ್ರಿಕೆಯ ಜಾಹೀರಾತೊಂದು ತಿಳಿಸುತ್ತದೆ.

- ಉತ್ತಮ ವಾಗ್ಮಿಗಳಾಗಿದ್ದ ಬೇಂದ್ರೆಯವರ ಉಪನ್ಯಾಸಗಳೆಂದರೆ ಜನರಿಗೆ ಹಿಗ್ಗು. ಅವರ ಮಾತೆಲ್ಲ ಕವಿತೆಗಳೋಪಾದಿಯಲ್ಲಿ ಹೊರಹೊಮ್ಮುತ್ತಿದ್ದವು. ಕನ್ನಡದಲ್ಲಿಯೇ ಅಲ್ಲದೆ ಮರಾಠಿ ಭಾಷೆಯಲ್ಲೂ ಬೇಂದ್ರೆ ಕೆಲವು ಕೃತಿಗಳನ್ನು ರಚಿಸಿದರು.

- ಆಧ್ಯಾತ್ಮದ ವಿಷಯದಲ್ಲಿ ಅವರು ಒಲವು ಬೆಳೆಸಿಕೊಂಡಿದ್ದರು. ಅರವಿಂದರ ವಿಚಾರಗಳಲ್ಲಿ ಆಸಕ್ತಿ ತೋರಿದ ಅವರು ಅರವಿಂದರ ಕೃತಿಯನ್ನು ಇಂಗ್ಲೀಷಿನಿಂದ ಭಾಷಾಂತರ ಮಾಡಿಕೊಟ್ಟರು. ಜಾನಪದ ಧಾಟಿಯ ಅವರ ಎಷ್ಟೋ ಕವಿತೆಗಳನ್ನು . ಗಾಯಕರು ಸುಶ್ರಾವ್ಯವಾಗಿ ಹಾಡಿದ್ದಾರೆ. ಅವರ ಕವಿತೆಗಳ ನಾದಮಾಧುರ್ಯ ಅಪಾರ.

- ಇವರು ಬರೆದ "ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ" ಇಂದಿಗೂ ಚಿಣ್ಣರ ಅತ್ಯಂತ ಪ್ರೀತಿಪಾತ್ರ ಕವನವಾಗಿದೆ.

- ಗಣಿತದ ಲೆಕ್ಕಾಚಾರ ಮಾಡುತ್ತ ಬಾಳೆಹಣ್ಣಿನ ಗೊನೆಯಲ್ಲಿ, ಹಲಸಿನ ಹಣ್ಣಿನ ಮುಳ್ಳುಗಳಲ್ಲಿ, ಜೇನುಗೂಡಿನಲ್ಲಿ, ನಿಮ್ಮ ಕಿರುಬೆರಳಿನ ಅಂಚಿಗಿಂತ ಚಿಕ್ಕದಾಗಿರುವ ಹೂವುಗಳಲ್ಲಿ, ಎಲ್ಲೆಲ್ಲೂ ಲೆಕ್ಕಾಚಾರವಿದೆ ಅನ್ನುತ್ತಾ ಕೊನೆ ಕೊನೆಗೆ ದ.ರಾ.ಬೇಂದ್ರೆಯವರು ಗಣಿತದ ಲೆಕ್ಕಾಚಾರದಲ್ಲೇ ಮುಳುಗಿದ್ದರು. ಇವರನ್ನು ಕನ್ನಡದ "ಕನ್ನಡದ ಠಾಗೋರ್" ಎಂದು ಕರೆಯಲಾಗುತ್ತದೆ. "ನಮನ"

Scanned with CamScanner

ಬೇಂದ್ರೆಯವರಿಗೆ ಸಂಖ್ಯೆಗಳು ಹೊಸ ಲೋಕವೊಂದನ್ನು ತೆರೆದಿದದ್ದವು. ಬೇಂದ್ರೆ ಮನಸಿಗೆ 441 ಹಾಗೂ ಹೃದಯಕ್ಕೆ 881 ಎಂದು ಸಂಖ್ಯೆ ನೀಡಿದ್ದರು

## ಬೇಂದ್ರೆಯವರ ಸಾಹಿತ್ಯ

### ಕವನ ಸಂಕಲನ

(ಪ್ರಥಮ ಆವೃತ್ತಿಯ ವರ್ಷದೊಂದಿಗೆ) ಅಂಬಿಕಾತನಯದತ್ತರ ಸಮಗ್ರ ಕಾವ್ಯ ೬ ಸಂಪುಟಗಳು

- ೧೯೨೨: ಕೃಷ್ಣಾಕುಮಾರಿ;
- ೧೯೩೨: ಗರಿ;
- ೧೯೩೪: ಮೂರ್ತಿ ಮತ್ತು ಕಾಮಕಸ್ತೂರಿ;
- ೧೯೩೭: ಸಖೀಗೀತ;
- ೧೯೩೮: ಉಯ್ಯಾಲೆ;
- ೧೯೩೮: ನಾದಲೀಲೆ;
- ೧೯೪೩: ಮೇಘದೂತ (ಕಾಳಿದಾಸನ ಸಂಸ್ಕೃತ ಮೇಘದೂತದ ಕನ್ನಡ ಅವತರಣಿಕೆ
- ೧೯೪೬: ಹಾಡುಪಾಡು;
- ೧೯೫೧: ಗಂಗಾವತರಣ;
- ೧೯೫೬: ಸೂರ್ಯಪಾನ;
- ೧೯೫೬: ಹೃದಯಸಮುದ್ರ;
- ೧೯೫೬: ಮುಕ್ತಕಂಠ;
- ೧೯೫೭: ಚೈತ್ಯಾಲಯ;
- ೧೯೫೭: ಜೀವಲಹರಿ;

ವಿಮರ್ಶೆ

೧೯೩೭: ಸಾಹಿತ್ಯ ಮತ್ತು ವಿಮರ್ಶೆ;

೧೯೪೦: ಸಾಹಿತ್ಯಸಂಶೋಧನೆ;

೧೯೪೫: ವಿಚಾರ ಮಂಜರಿ;

೧೯೫೪: ಕವಿ ಲಕ್ಷ್ಮೀಶನ ಜೈಮಿನಿಭಾರತಕ್ಕೆ ಮುನ್ನುಡಿ;

೧೯೫೯: ಮಹಾರಾಷ್ಟ್ರ ಸಾಹಿತ್ಯ;

ಸಾಯೋ ಆಟ (ನಾಟಕ)

೧೯೬೧: ಕಾವ್ಯೋದ್ಯೋಗ;

೧೯೬೮: ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು;


೧೯೭೪: ಸಾಹಿತ್ಯದ ವಿರಾಟ್ ಸ್ವರೂಪ;

೧೯೭೬: ಕುಮಾರವ್ಯಾಸ ಪುಸ್ತಿಕೆ;



Scanned with CamScanner

## 3. ಮಾಸ್ತಿ ವೆಂಕಟೇಶ ಅಯ್ಯಂಗಾರ



### ಬಾಲ್ಯ, ಜೀವನ, ವಿದ್ಯಾಭ್ಯಾಸ

- ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಾಸ್ತಿ ಗ್ರಾಮದಲ್ಲಿ ಜೂನ್ ೬ ೧೮೯೧ ರಲ್ಲಿ ಜನಿಸಿದರು. ಅವರು ಹುಟ್ಟುವ ಕಾಲಕ್ಕೆ ಮನೆಯಲ್ಲಿ ಬಡತನವಿತ್ತು. ಒಂದು ಕಾಲಕ್ಕೆ ಶ್ರೀಮಂತಿಕೆಯಿಂದ ವಿಜೃಂಭಿಸಿದ ಕುಟುಂಬ ಅವರ ಪೂರ್ವಿಕರದು. ಮಾಸ್ತಿ ವೆಂಕಟೇಶ ಅಯ್ಯಂಗಾ ರ್ "ಪೆರಿಯಾತ್" ಎಂದರೆ ದೊಡ್ಡ ಮನೆಯವರು. ಅವರ ವಿದ್ಯಾಭ್ಯಾಸ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಜರುಗಿತು.
- ಅವರ ಹಿರಿಯರು ಬಹು ಜನಕ್ಕೆ ಅನ್ನ ಹಾಕಿ ಹೆಸರು ಗಳಿಸಿದ್ದರಾದರೂ ಅವರು ವಾರದ ಮನೆಗಳಲ್ಲಿ ಊಟಮಾಡಿ ವಿದ್ಯಾಭ್ಯಾಸ ಮಾಡಬೇಕಾಯಿತು. ಹೊಂಗೇನಳ್ಳಿ, ಯಲಂದೂರು, ಶಿವಾರಪಟ್ಟಣ, ಮಳವಳ್ಳಿ, ಮೈಸೂರು, ಕಡೆಗೆ ಮದರಾಸು ಹೀಗೆ ನಾನಾ ಕಡೆಗಳಲ್ಲಿ ತಮ್ಮ ಬಂಧುಗಳ ನೆರವಿನಿಂದ ವಿದ್ಯಾಭ್ಯಾಸ ಮಾಡಿ ಎಂ.ಎ ಪದವಿ ಗಳಿಸಿದರು. ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ಮಾಸ್ತಿ ಯಾವ ಪರೀಕ್ಷೆಯಲ್ಲೂ

**ಪ್ರಥಮ ಸ್ಥಾನ ವನ್ನು ಬೇರೆಯವರಿಗೆ ಬಿಟ್ಟುಕೊಡಲಿಲ್ಲ.**

- ಮದ್ರಾಸಿನಲ್ಲಿ ಇಂಗ್ಲೀಷ್ ಎಂ.ಎ ಮಾಡಿಕೊಂಡು ಚಿನ್ನದ ಪದಕ ಗಳಿಸಿದ ಮಾಸ್ತಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸುಮಾರು ಒಂದೂವರೆ ತಿಂಗಳು ಉಪಾಧ್ಯಾಯರಾಗಿದ್ದು ಬೆಂಗಳೂರಿಗೆ ಬಂದು ಸಿವಿಲ್ ಪರೀಕ್ಷೆಗೆ ಕುಳಿತು ಅಲ್ಲಿಯೂ ಪ್ರಥಮರಾಗಿ ತೇರ್ಗಡೆಯಾದರು. ಸರ್ಕಾರದಲ್ಲಿ ಅಸಿಸ್ಟೆಂಟ್ ಕಮೀಶನರಾಗಿ ಕೆಲಸಕ್ಕೆ ಸೇರಿ ಸಮರ್ಪಕವಾಗಿ ಕೆಲಸ ನಿರ್ವಹಿಸಿದರು.
- ಸಾಹಿತ್ಯ ರಚನೆ ಅವರ ಪ್ರವೃತ್ತಿಯಾಗಿ ಬೆಳೆಯಿತು. ಮೆಟ್ರಿಕ್ಯುಲೇಷನ್(೧೯೦೭), ಎಫ್.ಎ (೧೯೦೯), ಬಿ.ಎ (ಮದರಾಸು ವಿಶ್ವವಿದ್ಯಾಲಯ ೧೯೧೦), ಮೈಸೂರು ಸಿವಿಲ್ ಸರ್ವಿಸ್ (೧೯೧೩), ಎಂ.ಎ (ಮದರಾಸು ವಿಶ್ವವಿದ್ಯಾಲಯ ೧೯೧೪) ಪರೀಕ್ಷೆಗಳಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿ, ೧೯೧೪ ರಲ್ಲಿ ಮೈಸೂರು ಸರ್ಕಾರದಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು.

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಾಪುರ

IQAC, Co-ordinator
S.B.Arts & K.C.P.Science College
Vijayapur.

Principal,
S.B. Arts and KCP Science College
VIJAYAPUR





Scanned with CamScanner

- ಮಾಸ್ತಿ ಕನ್ನಡಿಗರಿಗೆ ಒಂದು ಆದರ್ಶ. ಎಂಥ ಕಷ್ಟ ಕಾಲದಲ್ಲೂ ಅವರು ಜೀವನವನ್ನೆದುರಿಸಿದರು. ಸಾಹಿತ್ಯ ರಚಿಸಿದಂತೆಯೇ ಸಾಹಿತ್ಯ ಪೋಷಕರಾದರು. ಜಿ ಪಿ ರಾಜರತ್ನಂ, ದ ರಾ ಬೇಂದ್ರೆಯಂತಹವರಿಗೆ ಅವರು ಆದರ್ಶರಾಗಿದ್ದರು. ೧೯೧೦ ರಲ್ಲಿ ಬರೆದ **ರಂಗನ ಮದುವೆ** ಎಂಬ ಸಣ್ಣ ಕಥೆಗಳ ಸಂಗ್ರಹದಿಂದ ಹಿಡಿದು ಅವರು ನಿಧನರಾಗುವುದಕ್ಕೆ ಕೆಲವೇ ತಿಂಗಳುಗಳ ಹಿಂದೆ ಪ್ರಕಟವಾದ 'ಮಾತುಗಾರ ರಾಮಣ್ಣ' ಎಂಬ ಕೃತಿಯವರೆಗೆ ಅವರು ರಚಿಸಿದ ಕೃತಿಗಳ ಸಂಖ್ಯೆ ೧೨೩.
- ಇದರಲ್ಲಿ ಸಣ್ಣಕತೆಗಳು, ಕಾದಂಬರಿಗಳು, ನಾಟಕಗಳು, ವಿಮರ್ಶೆಗಳು, ಪ್ರಬಂಧಗಳು, ಧಾರ್ಮಿಕ ಕೃತಿಗಳು, ಅನುವಾದ, "ಜೀವನ" ಎಂಬ ಅವರೇ ನಡೆಸುತ್ತಿದ್ದ ಪತ್ರಿಕೆಯಲ್ಲಿ ಬರೆದ ಸಂಪಾದಕೀಯ ಲೇಖನಗಳು, ಕವಿತೆಗಳ ಸಂಗ್ರಹ, ಕಾವ್ಯ ಸೇರಿವೆ. ೨೦ನೆಯ ಶತಮಾನದ ಆರಂಭದ ಕಾಲ. ಕನ್ನಡ ಭಾಷೆಗೆ ಹೇಳಿಕೊಳ್ಳುವಂಥ ಪ್ರೋತ್ಸಾಹವಿರಲಿಲ್ಲ. ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಸಾಹಿತ್ಯದಲ್ಲಿ ಗಮನಾರ್ಹ ಕೆಲಸವಾಗಬೇಕಾಗಿದ್ದ ಕಾಲದಲ್ಲಿ ಮಾಸ್ತಿ ಸಾಹಿತ್ಯ ರಚನೆಯ ಕೆಲಸವನ್ನು ಕೈಗೊಂಡರು.
- ಸಣ್ಣ ಕತೆಗಳ ರಚನೆ ಅವರು ಪ್ರಧಾನವಾಗಿ ಆರಿಸಿಕೊಂಡ ಸಾಹಿತ್ಯ ಪ್ರಕಾರ. **ಶ್ರೀನಿವಾಸ** ಎಂಬ ಕಾವ್ಯನಾಮದಲ್ಲಿ ಮಾಸ್ತಿ ನೂರಾರು ಸಣ್ಣ ಕತೆಗಳನ್ನು ಬರೆದರು. ಹಲವಾರು ಕಥಾ ಸಂಕಲನಗಳನ್ನು ಪ್ರಕಟಿಸಿದರು. ಅವರ ಒಂದು ಸಣ್ಣಕಥೆಯನ್ನು ರಾಜಾಜಿಯವರು ತಮಿಳಿಗೆ ಅನುವಾದಿಸಿದರು. ಇಂಗ್ಲೀಷ್ ಹಾಗೂ ಇತರ ಭಾರತೀಯ ಭಾಷೆಗಳಿಗೆ ಮಾಸ್ತಿ ಅವರ ಸಣ್ಣ ಕತೆಗಳು ಅನುವಾದಗೊಂಡಿವೆ. ದೂರದರ್ಶನದಲ್ಲಿ ಕೆಲವು ಕತೆಗಳು ಅಭಿನಯಿಸಲ್ಪಟ್ಟು ಪ್ರಸಾರವಾಗಿವೆ. *ಕಥೆ ಹೇಳುವುದರಲ್ಲಿ ಮಾಸ್ತಿ ಎತ್ತಿದ ಕೈ. ಅವರ ಕಥೆಗಳನ್ನು ಓದುತ್ತಿದ್ದರೆ ಅವು ಕಣ್ಣಿಗೆ ಕಟ್ಟಿದಂತಿರುತ್ತವೆ. "ಸುಬ್ಬಣ್ಣ" ಅವರ ಒಂದು ಖ್ಯಾತ ನೀಳ್ಗತೆ. ಅಪಾರ ಮಾನವೀಯ ಅಂತಃಕರಣವನ್ನು ಕತೆಯಲ್ಲಿ ತುಳುಕಿಸಿದ ಅವರು ಕಥೆಗಳ ರಚನೆಗೆ ಬಳಸಿದ ತಂತ್ರ ಅಪರೂಪದ್ದಾಗಿದೆ. ಸಣ್ಣ ಕಥೆಗಳ ಜನಕರೆಂದೇ ಅವರಿಗೆ ಕರೆಯುತ್ತಿದ್ದ ರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಅವರ ಕಥೆಗಳ ಸಂಕಲನಗಳಿಗೆ ಲಭಿಸಿತು. ಕಥೆ ಹೇಳುವುದು ಒಂದು ಪುಣ್ಯದ ಕೆಲಸವೆಂದು ಅವರು ಭಾವಿಸಿದ್ದರು.
- ಮಾಸ್ತಿ ಕಥೆಗಳನ್ನು ಬರೆದಂತೆಯೇ ಕಾದಂಬರಿ, ಕವಿತೆ, ಪ್ರಬಂಧ ಇವುಗಳನ್ನೂ ಬರೆದರು, ನಾಟಕಗಳನ್ನೂ ರಚಿಸಿದರು. ಅವರ ಎಲ್ಲ ಕೃತಿಗಳಲ್ಲೂ ಕುಶಲತೆ, ಸೌಮ್ಯತೆ, ಜೀವನ ದರ್ಶನಗಳನ್ನು ಸ್ಪಷ್ಟವಾಗಿ ಕಾಣಬಹುದು. "ಭಾರತತೀರ್ಥ", "ಆದಿಕವಿ ವಾಲ್ಮೀಕಿ" ಇವು ಭಾರತ ರಾಮಾಯಣಗಳನ್ನು ಕುರಿತು ಬರೆದಿರುವ ಗ್ರಂಥಗಳಾದರೆ "ಶ್ರೀರಾಮ ಪಟ್ಟಾಭಿಷೇಕ" ಅವರ ಒಂದು ಕಾವ್ಯ.
- ರವೀಂದ್ರನಾಥ ಠಾಕೂರ್, ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಗಳನ್ನೂ, ಪುರಂದರದಾಸ, ಕನಕದಾಸ, ಅನಾರ್ಕಳಿ, ತಿರುಪಾಣಿ, ಶಿವಾಜಿ ಮೊದಲಾದ ನಾಟಕಗಳನ್ನೂ, ಷೇಕ್ಸ್‌ಪಿಯರನ ನಾಟಕಗಳ ಅನುವಾದಗಳನ್ನೂ ಮಾಸ್ತಿ ಪ್ರಕಟಿಸಿದ್ದಾರೆ.
- ಮಾಸ್ತಿ ಬರೆದ ಕಾದಂಬರಿಗಳು ಎರಡು. ಜ್ಞಾನಪೀಠ ಪ್ರಶಸ್ತಿ ಗಳಿಸಿದ ಕೃತಿ ಚಿಕವೀರ ರಾಜೇಂದ್ರ - ಕೊಡಗಿನ ಕಡೆಯ ರಾಜ ಚಿಕವೀರ ರಾಜೇಂದ್ರನನ್ನು ಕುರಿತದ್ದು, ಮತ್ತೊಂದು "ಚನ್ನಬಸವನಾಯಕ".
- "ಭಾವ" - ಮಾಸ್ತಿ ಅವರ ಆತ್ಮಕಥೆ ಇರುವ ಮೂರು ಸಂಪುಟಗಳ ಗ್ರಂಥ.



Scanned with CamScanner

## ಮುಖ್ಯ ಕೃತಿಗಳು

ಸಣ್ಣ ಕತೆಗಳ ಸಂಗ್ರಹ

- ಸಣ್ಣಕತೆಗಳು (೫ ಸಂಪುಟಗಳು)
- ರಂಗನ ಮದುವೆ
- ಮಾತುಗಾರ ರಾಮಣ್ಣ

ನೀಳ್ಗತೆ

- ಸುಬ್ಬಣ್ಣ (೧೯೨೮)
- ಶೇಷಮ್ಮ(೧೯೭೬)

ಕಾವ್ಯ ಸಂಕಲನಗಳು

- ಬಿನ್ನಹ, ಮನವಿ(೧೯೨೨)
- ಅರುಣ(೧೯೨೪)
- ತಾವರೆ(೧೯೩೦)
- ಸಂಕ್ರಾಂತಿ(೧೯೬೯)
- ನವರಾತ್ರಿ(೫ ಭಾಗ ೧೯೪೪-೧೯೫೩)
- ಚೆಲುವು, ಸುನೀತ
- ಮಲಾರ
- ಶ್ರೀರಾಮ ಪಟ್ಟಾಭಿಷೇಕ (ಖಂಡಕಾವ್ಯ)

ಜೀವನ ಚರಿತ್ರೆ

- ರವೀಂದ್ರನಾಥ ಠಾಕೂರ(೧೯೩೫)
- ಶ್ರೀ ರಾಮಕೃಷ್ಣ(೧೯೩೬)

ಪ್ರಬಂಧ

- ಕನ್ನಡದ ಸೇವೆ(೧೯೩೦)
- ವಿಮರ್ಶೆ (೪ ಸಂಪುಟ ೧೯೨೮-೧೯೩೯)
- ಜನತೆಯ ಸಂಸ್ಕೃತಿ(೧೯೩೧)
- ಜನಪದ ಸಾಹಿತ್ಯ(೧೯೩೭)
- ಆರಂಭದ ಆಂಗ್ಲ ಸಾಹಿತ್ಯ(೧೯೭೯)


ನಾಟಕ

- ಶಾಂತಾ, ಸಾವಿತ್ರಿ, ಉಷಾ (೧೯೨೩)
- ತಾಳೀಕೋಟೆ(೧೯೨೯)
- ಶಿವಛತ್ರಪತಿ(೧೯೩೨)



Scanned with CamScanner

## 4. ಡಾ. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ



ಡಾ. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರು. ಅವರು ಚಿಂತಕರೂ ವಿಮರ್ಶಕರೂ ಆಗಿ ಪ್ರಸಿದ್ಧರಾಗಿದ್ದವರು. ಇಂಗ್ಲೀಷ್ ಪ್ರಾಧ್ಯಾಪಕರಾಗಿ ವೃತ್ತಿಜೀವನ ಪ್ರಾರಂಭಿಸಿದ ಅವರು ಅನಂತರ ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅನೇಕ ಮುಖ್ಯ ಹುದ್ದೆಗಳನ್ನು ನಿರ್ವಹಿಸಿದರು. ತಮ್ಮ ಸಮಗ್ರ ಸಾಹಿತ್ಯಕ್ಕಾಗಿ ೧೯೯೪ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದರು. ಜನನ

ಅನಂತಮೂರ್ತಿಯವರು ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ 'ಮೇಳಿಗೆ' ಹಳ್ಳಿಯಲ್ಲಿ, ೧೯೩೨ರ ಡಿಸೆಂಬರ್ ೨೧ರಂದು. ತಂದೆ ಉಡುಪಿ ರಾಜಗೋಪಾಲಾಚಾರ್ಯ, ತಾಯಿ ಸತ್ಯಮ್ಮ (ಸತ್ಯಭಾಮ).

### ವಿದ್ಯಾಭ್ಯಾಸ

'ದೂರ್ವಾಸಪುರ'ದ ಸಾಂಪ್ರದಾಯಿಕ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಆರಂಭಿಸಿದ ಅನಂತಮೂರ್ತಿಯವರ ಓದು ಅನಂತರ ತೀರ್ಥಹಳ್ಳಿ, ಮೈಸೂರುಗಳಲ್ಲಿ ಮುಂದುವರೆಯಿತು. ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ ಪದವಿ ಪಡೆದ ಇವರು ಹೆಚ್ಚಿನ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೋದರು. ಕಾಮನ್‌ವೆಲ್ತ್ ವಿದ್ಯಾರ್ಥಿ ವೇತನ ಪಡೆದ ಇವರು ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾನಿಲಯದಿಂದ ಇಂಗ್ಲೀಷ್ ಮತ್ತು ತೌಲನಿಕ ಸಾಹಿತ್ಯ ಎಂಬ ವಿಷಯದಲ್ಲಿ ೧೯೬೬ರಲ್ಲಿ ಪಿಎಚ್.ಡಿ ಪದವಿ ಪಡೆದರು.

### ವೃತ್ತಿ ಜೀವನ

- ಹಾಸನ, ಶಿವಮೊಗ್ಗ, ಮೈಸೂರುಗಳಲ್ಲಿ ಇಂಗ್ಲೀಷ್ ಉಪನ್ಯಾಸಕ
- ಮೈಸೂರು ಪ್ರಾದೇಶಿಕ ಶಿಕ್ಷಣ ಕಾಲೇಜಿನಲ್ಲಿ ರೀಡರ್, ೧೯೬೬-೧೯೭೦
- ಮೈಸೂರು ವಿಶ್ವವಿದ್ಯಾಲಯದಲ್ಲಿ ರೀಡರ್, ಪ್ರಾಧ್ಯಾಪಕ, ೧೯೭೦-೮೭

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ

IQAC, Co-ordinator
S.B.Arts & K.C.P.Science College,
ಎಸ್ ಬಿ ಕಲಾ ಮತ್ತು ಕೆ ಸಿ ಪಿ ವಿಜ್ಞಾನ ಮಹಾ ವಿದ್ಯಾಲಯ ವಿಜಯಪುರ
Vijayapur

Principal,
S.B. Arts and KCP Science College
VIJAYAPUR



Scanned with CamScanner

## ಪ್ರಶಸ್ತಿ ಮತ್ತು ಪುರಸ್ಕಾರಗಳು

- ಕೃಷ್ಣರಾವ್ ಚಿನ್ನದ ಪದಕ (೧೯೫೮)
- ಸಂಸ್ಕಾರ, ಘಟಶ್ರಾದ್ಧ ಮತ್ತು ಬರ ಚಿತ್ರಗಳಿಗೆ ಅತ್ಯುತ್ತಮ ಕತೆಗಾಗಿ ಪ್ರಶಸ್ತಿ (ಕ್ರಮವಾಗಿ ೧೯೭೦, ೧೯೭೮, ೧೯೮೯)
- ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೮೩)
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೮೪)
- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
- ಮಾಸ್ತಿ ಪ್ರಶಸ್ತಿ (೧೯೯೪)
- ಜ್ಞಾನಪೀಠ ಪ್ರಶಸ್ತಿ (೧೯೯೪)
- ಬಷೀರ್ ಪುರಸ್ಕಾರ, ಕೇರಳ ಸರ್ಕಾರ (೨೦೧೨)
- ರವೀಂದ್ರ ಟ್ಯಾಗೋರ್ ಸ್ಮಾರಕ ಪದಕ (೨೦೧೨)
- ಗಣಕ ಸೃಷ್ಟಿ ಪ್ರಶಸ್ತಿ, ಕೋಲ್ಕತ (೨೦೦೨)
- ಪದ್ಮಭೂಷಣ (೧೯೯೮)
- ಶಿಖರ್ ಸಮ್ಮಾನ್ (ಹಿಮಾಚಲ ಪ್ರದೇಶ ಸರ್ಕಾರ) (೧೯೯೫)
- ೬೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (ತುಮಕೂರು)

## ನಿಧನ

ಡಾ.ಅನಂತ ಮೂರ್ತಿಯವರು ೨೦೦೨ರಿಂದ ಮೂತ್ರಪಿಂಡದ ಕಾಯಿಲೆಯಿಂದ ನರಳುತ್ತಿದ್ದರು. ಜೊತೆಗೆ ಸಕ್ಕರೆ ಕಾಯಿಲೆ ಕಾಡುತ್ತಿತ್ತು. ಆರೋಗ್ಯ ತೀವ್ರ ಹದಗೆಟ್ಟ ಹಿನ್ನೆಲೆಯಲ್ಲಿ ಬೆಂಗಳೂರಿನ 'ಮಣಿಪಾಲ್ ಆಸ್ಪತ್ರೆ'ಯಲ್ಲಿ ೧೦ ದಿನಗಳ ಕಾಲ ಚಿಕಿತ್ಸೆ ಪಡೆದು ಗುಣಹೊಂದದೆ ಮೂತ್ರಪಿಂಡ ವೈಫಲ್ಯ ಹಾಗು ಲಘು ಹೃದಯಾಘಾತದಿಂದ 2014ರ ಆಗಸ್ಟ್ 22ರಂದು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಬೆಂಗಳೂರಿನ ಡಾಲರ್ ಕಾಲೊನಿಯಲ್ಲಿ ವಾಸಿಸುತ್ತಿದ್ದ ಮೂರ್ತಿಯವರ ಅಂತಿಮ ಸಂಸ್ಕಾರ, ಬೆಂಗಳೂರಿನ 'ಜ್ಞಾನಭಾರತಿ ಕಲಾಗ್ರಾಮ'ದಲ್ಲಿ2014ರ ಆಗಸ್ಟ್ 23 ನೆಯ ತಾರೀಖಿನ ಮಧ್ಯಾಹ್ನ ಸುಮಾರು ೪ ಗಂಟೆಗೆ ಜರುಗಿತು.[೨] ಮೂರ್ತಿಯವರು ಪತ್ನಿ ಎಸ್ತರ್, ಮಗ ಶರತ್ ಮತ್ತು ಮಗಳು ಅನುರಾಧರನ್ನು ಆಗಲಿದ್ದಾರೆ.

## ಒಂದಿಷ್ಟು ಹೆಚ್ಚಿನ ಮಾಹಿತಿಗಳು

- ೧೯೫೫ರಲ್ಲಿ **ಎಂದೆಂದೂ ಮುಗಿಯದ ಕತೆ** ಕಥಾ ಸಂಕಲನದಿಂದ ಅವರ ಸಾಹಿತ್ಯ ಕೃಷಿ ಆರಂಭವಾಯಿತು.
- ೧೯೬೫ರಲ್ಲಿ ಮೊದಲ ಕಾದಂಬರಿ ಸಂಸ್ಕಾರ ಪ್ರಕಟವಾಯಿತು. ಇದು ವ್ಯಾಪಕ ಚರ್ಚೆಗೆ ಒಳಗಾದ ಕಾದಂಬರಿ. ಈ ಕಾದಂಬರಿ ಭಾರತದ ಹಲವು ಭಾಷೆಗಳಲ್ಲದೆ, ಇಂಗ್ಲಿಷ್, ರಷ್ಯನ್, ಫ್ರೆಂಚ್, ಜರ್ಮನ್, ಹಂಗೇರಿಯನ್ ಮತ್ತಿತರ ಭಾಷೆಗಳಿಗೆ ಅನುವಾದವಾಗಿದೆ.
- ಯು.ಆರ್.ಅನಂತಮೂರ್ತಿಯವರ ಮೊದಲ ಕಾದಂಬರಿ **ಸಂಸ್ಕಾರ** ಎಂದೇ ಎಲ್ಲರೂ ಭಾವಿಸಿದ್ದರು. ಅದಕ್ಕೂ ಮೊದಲೇ ಅನಂತಮೂರ್ತಿ ೧೯೫೮ ರಲ್ಲಿ ಬರೆದು ಪ್ರಕಟವಾಗಿರದಿದ್ದ **ಪ್ರೀತಿ-ಮೃತ್ಯು-ಭಯ** ಎಂಬ ಕಾದಂಬರಿ ೨೦೧೨ ಜೂನ್ ೧೦ಕ್ಕೆ ಬಿಡುಗಡೆಯಾಯಿತು.
- ಇಂಗ್ಲೀಷಿನಲ್ಲಿ ಇವರು ಬರೆದಿರುವ ಹಲವಾರು ಪ್ರಬಂಧಗಳು ದೇಶ-ವಿದೇಶಗಳ ಸಾಹಿತ್ಯಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

Scanned with CamScanner

ಬಿ.ಎಲ್.ಡಿ.ಇ

# ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ

**2016**

## ಯೋಜನಾ ಕಾರ್ಯ

## ಹರಿದಾಸ ಸಾಹಿತ್ಯ

ಬಿ.ಎ. 5ನೇ ಸೇಮಿಸ್ಟರ್ 2016–17

## ಸಂಯೋಜಕರು

ವಿಭಾಗದ ಮುಖ್ಯಸ್ಥರು

**ಶ್ರೀ ಎಸ್.ಪಿ. ಮದ್ರೇಕರ**

ಕನ್ನಡ ವಿಭಾಗ



ಮಹೇಶ ಬಬಲೇಶ್ವರ

A1446865



ಹಣಮಂತ ಮೇತ್ರಿ

A1446845

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

## 8. ಹರಿದಾಸ ಚಳುವಳಿ (Haridasa Movement)

### 1) ಪ್ರಮುಖ ಹರಿದಾಸರು

ಭಗವಂತನಾದ ಶ್ರೀಹರಿಯ (ವಿಷ್ಣು) ದಾಸರಾಗಿದ್ದುಕೊಂಡು, ಆತನೇ ಪರದೈವವೆಂದು ತಿಳಿದು ಅವನ ಸ್ಮರಣೆಯೇ ತನ್ನ ಮುಕ್ತಿಗೆ ಸಾಧನವೆಂದು ಪರಿಗಣಿಸಿ ನಡೆದುಕೊಳ್ಳುವವರನ್ನು ಹರಿದಾಸರೆಂದು ಕರೆಯಲಾಗಿದೆ. ಹರಿಭಕ್ತರ ಉಗಮ ಪುರಾಣಪುರುಷರಾದ ನಾರದ, ಪ್ರಹ್ಲಾದರ ಕಾಲಕ್ಕೆ ಒಯ್ಯ ಬಹುದಾದರೂ ಅದು ಹೆಚ್ಚು ಪ್ರಭಾವೀಪೂರ್ಣವಾಗಿ ಜನತೆಯನ್ನು ಮುಟ್ಟಿದುದು ಮಧ್ಯಯುಗದಲ್ಲೆ ಹರಿಸ್ಮರಣೆಯಲ್ಲಿ ತೊಡಗಿದ ಹರಿದಾಸರು ಕನ್ನಡದಲ್ಲಿ ರಚಿಸಿದ ಕೀರ್ತನೆಗಳು ಒಂದೆರಡಲ್ಲ. ಆ ಮೂಲಕ ಅವರು ಕನ್ನಡಸಾಹಿತ್ಯಾ ಭಿವೃದ್ಧಿಗೂತಮ್ಮದೇ ಆದ ಕಾಣಿಕೆ ಸಲ್ಲಿಸಿದ್ದಾರೆ. ಸರಳ, ಸುಲಭ ಹಾಗೂ ನಾಣ್ಣುಡಿಯಲ್ಲಿದ್ದ ಅವರ ಕೀರ್ತನೆಗಳು ಅಂದಿನ ಸಮಾಜದ ಅಂಕುಡೊಂಕುಗಳಿಗೂ ಕನ್ನಡಿ ಒಡಿದಿವೆ. ಅಲ್ಲದೆ ಅನಂತರದ ಕರ್ನಾಟಕ ಸಂಗೀತ ಪ್ರಗತಿಗೂ ನಾಂದಿಯಾಗಿವೆ. ಪ್ರೊಫೆಸರ್ ಎಂ.ಪಿ. ಕೃಷ್ಣರಾವ್ ಅಭಿಪ್ರಾಯಪಟ್ಟಿರುವಂತೆ: "ಹರಿದಾಸ ಚಳುವಳಿ ತಮಿಳುನಾಡಿನ ಅಳ್ವಾರರು ಮತ್ತು ವೀರಶೈವ ಧರ್ಮದ ವಚನಕಾರರಿಗೂ ಋಣಿಯಾಗಿದೆ."

ಮಧ್ಯಯುಗದ ಹರಿದಾಸ ಸಮೂಹದಲ್ಲಿ ಬಹುಮಂದಿ ಮಧ್ವಾಚಾರ್ಯರ ಅನುಯಾಯಿಗಳೆ. ಇವರನ್ನು ಭಾಗವತರೆಂದೂ ಕರೆಯುವುದುಂಟು. ಮುಕ್ತಿಗೆ ಭಗವಂತನ ಅನುಗ್ರಹ ಅತ್ಯವಶ್ಯ. ಅದನ್ನು ಸರಳ, ಸುಲಭ ಮಾರ್ಗವಾದ ಅನನ್ಯಭಕ್ತಿಯಿಂದ ಪಡೆಯಬೇಕೆಂಬುದೇ ಹರಿದಾಸ ಚಳುವಳಿಯ ಸಾರ. ಭಕ್ತಿ, ಭಗವಂತನಿಗೂ ಮತ್ತು ಭಕ್ತನಿಗೂ ಇರುವ ನಡುವಿನ ಸಂಬಂಧವನ್ನು ಸೂಚಿಸುತ್ತದೆ. ಈ ಮುನ್ನ ಮುಕ್ತಿಗಾಗಿ ಶಂಕರಾಚಾರ್ಯರು ಪ್ರಚುರಪಡಿಸಿದ ಜ್ಞಾನಮಾರ್ಗ ಎಲ್ಲರಿಗೂ ಎಟಕುವಂತಹುದಾಗಿರಲಿಲ್ಲ. ಇದನ್ನು ಮನಗಂಡ ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಹಾಗೂ ಬಸವೇಶ್ವರರು ಸರ್ವರು ಒಳಿತಿಗಾಗಿ ಭಕ್ತಿಮಾರ್ಗ ಬೋಧಿಸಿದರು. ಇದು ಕಾಲಕಾಲಕ್ಕೆ ಹೆಚ್ಚು ಪ್ರಚಾರಗೊಳ್ಳುತ್ತಾ ಬಂದು ಹದಿನೈದು-ಹದಿನಾರನೇ ಶತಮಾನಗಳಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಇದಕ್ಕೆ ಪ್ರಮುಖ ಕಾರಣ ಕರ್ತೃಗಳು :

1) ವ್ಯಾಸ ಕೂಟ 2) ದಾಸ ಕೂಟ

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಾಪುರ
IQAC, Coordinator
S.B.Arts & K.C.P.Science College,
Vijayapur
Principal,
S.B. Arts and KCP Science College
VIJAYAPUR



Scanned with CamScanner


# 1. ವ್ಯಾಸಕೂಟ

ಮಾಧ್ವ ಮಠಗಳ ಅಧಿಪತಿಗಳಾಗಿ ಹರಿದಾಸ ಚಳುವಳಿಯನ್ನು ಪ್ರವರ್ಧಮಾನಕ್ಕೆ ತಂದ ನರಹರಿ ತೀರ್ಥರು, ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ರಾಘವೇಂದ್ರ ರಾಯರು (ಸ್ವಾಮಿ) ಮೊದಲಾದವರನ್ನು ವ್ಯಾಸ ಕೂಟ ಎಂಬ ಗುಂಪಿಗೆ ಸೇರಿಸಲಾಗಿದೆ. ಇವರು ಮಾಧ್ವ ಮಠಗಳ ಗುರು ಪರಂಪರೆಗೆ ಸೇರಿದವರು. ಇವರ ಆಶ್ರಯದಲ್ಲಿ ಅನೇಕ ಸಂತ ಕವಿಗಳು ಹರಿದಾಸ ದೀಕ್ಷೆ ಪಡೆದು ಭಿಕ್ಷಾಟನೆ ಮಾಡುತ್ತ ಮಾಧ್ವ ಸಿದ್ಧಾಂತವನ್ನು ಪ್ರಚಾರಮಾಡಿದರು. ವ್ಯಾಸಕೂಟದ ಆಚಾರ್ಯರು ಸಂಸ್ಕೃತ ಭಾಷೆಯಲ್ಲಿ ದ್ವೈತ ಸಿದ್ಧಾಂತದ ಬಗ್ಗೆ ವ್ಯಾಖ್ಯಾನಗಳನ್ನು ರಚಿಸಿದರು. ಕೀರ್ತನೆಗಳನ್ನು ಮಾತ್ರ ಕನ್ನಡದಲ್ಲಿ ರಚಿಸಿದರು.

## ವ್ಯಾಸಕೂಟದ ಪ್ರಮುಖರು :

1) ನರಹರಿ ತೀರ್ಥರು
2) ಶ್ರೀಪಾದ ರಾಯರು
3) ವ್ಯಾಸರಾಯರು
4) ವಾದಿರಾಜರು
5) ರಾಘವೇಂದ್ರ ರಾಯರು

### 1) ನರಹರಿ ತೀರ್ಥ : (1280–1333) :– ಒರಿಸ್ಸಾ :ಉಡುಪಿ



ವ್ಯಾಸಕೂಟ ಪ್ರವರ್ತಕರಲ್ಲಿ ನರಹರಿ ತೀರ್ಥರು ಮೊದಲಿಗರು. ಅವರು ಒರಿಸ್ಸಾ ಮೂಲದವರು. ಆರಂಭದಲ್ಲಿ ಒರಿಸ್ಸಾದ ಗಜಪತಿ ಅರಸನ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದರು. ಅಲ್ಲಿ ಆಗಮಿಸಿದ ಮಧ್ವಾಚಾರ್ಯರಿಂದ ಸನ್ಯಾಸ ದೀಕ್ಷೆ ಪಡೆದರು. ಆ ಸಂದರ್ಭದಲ್ಲಿ ಅರಮನೆಯ ಬೊಕ್ಕಸದಲ್ಲಿದ್ದ ರಾಮ ಮತ್ತು ಸೀತೆಯರ ವಿಗ್ರಹಗಳನ್ನು ಮಾಧ್ವರಿಗೆ ಉಡುಗೊರೆಯಾಗಿ ಅರ್ಪಿಸಲಾಯಿತು. ಈ ವಿಗ್ರಹಗಳನ್ನು ಮಧ್ವಾಚಾರ್ಯರು ಉಡುಪಿಯ ಅನಂತೇಶ್ವರ ದೇವಾಲಯದಲ್ಲಿ ಸ್ಥಾಪಿಸಿದರು. ಅನಂತದಲ್ಲಿ ಕರ್ನಾಟಕದಲ್ಲಿ ತೀರ್ಥಯಾತ್ರೆ ಕೈಗೊಂಡು ಕೊನೆಯ ಉಡುಪಿಯಲ್ಲಿ ನೆಲೆನಿಂತರು. ಇಲ್ಲಿ ನೆಲಸಿದ ಮೇಲೆ ಕನ್ನಡವನ್ನು ಕಲಿತು ಕೀರ್ತನೆಗಳನ್ನು ರಚಿಸಿದರು. ಇವರ ಅಂಕಿತ ನಾಮ ಶ್ರೀ "ರಘುಪತಿ".

For ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ




IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

## 4) ವಾದಿರಾಜರು (1480–1600):ಸೋದೆಮಠ :ಸ್ವಾದಿ



ಹರಿದಾಸ ಚಳುವಳಿಯ ಪ್ರಮುಖರಲ್ಲೊಬ್ಬರಾದ ವಾದಿರಾಜರು ಉಡುಪಿಯ ಬಳಿಯ ಹೂವಿನಕೆರೆಎಂಬಲ್ಲಿ ಜನಿಸಿದರು. ವಿಜಯನಗರದ ವ್ಯಾಸರಾಯ ಮಠಕ್ಕೆ ಸೇರಿದ ಹಂಪೆಯ ಸರಸ್ವತಿ ವಿದ್ಯಾಪೀಠದ ಅಧ್ಯಾತ್ಮ ಗುರುಗಳಾದ ವ್ಯಾಸರಾಯರಲ್ಲಿ ಅಧ್ಯಯನ ನಡೆಸಿ ವಿದ್ವನ್ಮಣಿಯಾದರು. ನಂತರ ಹಂಪೆಯ ವ್ಯಾಸರಾಯ ಮಠ ಮತ್ತು ಸೋದೆಮಠದ ಮುಖಂಡರಾಗಿ ಅಧಿಕಾರ ರೂಢರಾಗಿದ್ದುಕೊಂಡು ವಿಜಯನಗರ ಅರಸ ಅಚ್ಯುತರಾಯನ ರಾಜಗುರುಗಳಾಗಿದ್ದು ಮಾರ್ಗದರ್ಶನ ನೀಡುತ್ತಿದ್ದರು.

ವಾದಿರಾಜರು ಕನ್ನಡದಲ್ಲಿ ರುಕ್ಮಿಣಿ ವಿಜಯ, ಸ್ವಪ್ನ ಗದ್ಯ, ವೈಕುಂಠ ವರ್ಣನೆ, ಕೀಚಕ ವಧೆ, ಲಕ್ಷ್ಮೀಶೋಬಾನೆ, ಭಾರತ ತಾತ್ಪರ್ಯ ನಿರ್ಣಯ ಮೊದಲಾದ ಕೃತಿಗಳನ್ನೂ ಅನೇಕ ದೇವರ ನಾಮಗಳನ್ನು ರಚಿಸಿದರು. ಇವರ ಅಂಕಿತನಾಮ "ಹಯವದನ." ವಾದಿರಾಜರು ಉಡುಪಿಯ ಅಷ್ಟ ಮಠಗಳಲ್ಲಿದ್ದ ಪರ್ಯಾಯ ಪದ್ದತಿಯನ್ನು ಎರಡು ವಾರ (ಪಕ್ಷ)ಗಳಿಂದ 2 ವರ್ಷಗಳಿಗೊಮ್ಮೆ ಮಾಡುವಂತೆ ಬದಲಾಯಿಸಿದರು. ಇವರ ಮತ್ತೊಂದು ಸಾಧನೆ ಎಂದರೆ ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಯ ಶಿವಲಿಂಗವನ್ನು ಸ್ಥಾಪಿಸಲಾಯಿತು. ಇದನ್ನು ಮಂಗಳೂರಿನ ಕದ್ರಿಯಿಂದ ತರಲಾಗಿದ್ದಿತು. ಮಾಧ್ವ ಪಂಥಿಯಾದ ವ್ಯಾಸ ರಾಯರು ಶಿವಲಿಂಗ ಸ್ಥಾಪನೆ ಮಾಡಿ ಸಮನ್ವಯ ಮೆರೆದಿದ್ದಾರೆ. ಸು. 120 ವರ್ಷಗಳ ದೀರ್ಘ ಆಯುಷ್ಯವನ್ನು ಪೂರ್ಣಗೊಳಿಸಿದ ವಾದಿರಾಜರು 1600ರಲ್ಲಿ ಕಾಲವಶರಾದರು.

**ತಾಳುವಿಕೆಗಿಂತ ತಪವು ಇಲ್ಲ ॥ಪ॥**

**ಕೇಳ ಬಲ್ಲವರಿಗೆ ಹೇಳುವೆನು ಸೊಲ್ಲ॥**

**ದುಷ್ಟಮನುಜರು ಪೇಳ್ವ ನಿಷ್ಠುರದ ನುಡಿತಾಳು**
**ಕಷ್ಟಬಂದರೆ ತಾಳು ಕಂಗೆಡದೆ ತಾಳು**
**ನೆಟ್ಟಸಸಿ ಫಲಬರುವ ತನಕ ಶಾಂತಿಯ ತಾಳು**
**ಕಟ್ಟುಬುತ್ತಿಯು ಮುಂದೆ ಉಣಲುಂಟು ತಾಳು**




Scanned with CamScanner

ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು
ಸುಳಿನುಡಿ ಕುಹಕ ಕುಮಂತ್ರವನು ತಾಳು
ಅಳುಕದಲೆ ಬಿರಿಸು ಬಿಂಕದ ನುಡಿಯ ತಾಳು
ಹಲಧರಾನುಜನನ್ನು ಹೃದಯದಲಿ ತಾಳು

ನಕ್ಕು ನುಡಿವರ ಮುಂದೆ ಮುಕ್ಕರಿಸದೆ ತಾಳು
ಅಕ್ಕಸವ ಮಾಡುವರ ಮುಂದೆ ಮುಕ್ಕರಿಸದೆ ತಾಳು
ಅಕ್ಕಸವ ಮಾಡುವರ ಅಕ್ಕರದಿ ತಾಳು
ಉಕ್ಕೋ ಹಾಲಿಗೆ ನೀರನಿಕ್ಕುವಂದರಿ ತಾಳು
ಪಕ್ಷೀಶ ಹಯವದನ ಶರಣೆಂದು ಬಾಳು.

## 5) ರಾಘವೇಂದ್ರ ರಾಯರು (1600–71): ಮಂತ್ರಾಲಯ



ವಿಜಯನಗರ ಪತನಾನಂತರ ಕುಂಭಕೋಣಮ್‌ನಲ್ಲಿ ವಲಸೆ ಹೋಗಿ ನೆಲಸಿದ ಕನ್ನಡ ಕುಟುಂಬವೊಂದರಲ್ಲಿ ರಾಘವೇಂದ್ರರಾಯರ ಜನನವಾಯಿತು. ಕುಂಭಕೋಣಮ್ ಮತ್ತು ಕಂಚಿಯಲ್ಲಿ ಅಧ್ಯಯನ ನಡೆಸಿದ ಇವರು ಸಂಸಾರಿಗಳಾಗಿ ಸ್ವಲ್ಪ ಕಾಲ ಕಳೆದರು. ತದನಂತರದ ದಿನಗಳಲ್ಲಿ ಮಹಾನ್ ಕವಯಿತ್ರಿಯಾಗಿ ಖ್ಯಾತಿಗೊಂಡಿ ರುಕ್ಮೀಣಿಬಾಯಿ ಇವರ ಮಗಳೇ. ಈ ಮಧ್ಯೆ ಆಧ್ಯಾತ್ಮದಲ್ಲಿ ಅಪಾರ ಸಾಧನೆ ಮಾಡಿದ ರಾಘವೇಂದ್ರರಾಯರು ಹಲವು ಅದ್ಭುತ ಪವಾಡಗಳನ್ನು ಮಾಡಿ ಜನರ ಗಮನ ಸೆಳೆದರು. ಅದೋನಿ ಸಂಸ್ಥಾನದ ನವಾಬ ಅಸದುಲ್ಲಾ ಖಾನನ ಮೆಚ್ಚುಗೆಗೆ ಪಾತ್ರರಾಗಿ ಅವನಿಂದ ದತ್ತಿಯಾಗಿ ಪಡೆದ ಭೂಮಿಯಲ್ಲಿ ಮಂತ್ರಾಲಯ ನಿರ್ಮಿಸಿದರು. 1671ರಲ್ಲಿ ಸಜೀವ ಸಮಾಧಿಯಾದರು. ಕರ್ನೂಲಿನ ಕಲೆಕ್ಟರನಾಗಿದ್ದ ಸರ್ ಥಾಮಸ್ ಮನ್ರೋ 1820ರಲ್ಲಿ ಮಂತ್ರಾಲಯ ದೇವಾಲಯಕ್ಕೆ ಮತ್ತಷ್ಟು ಭೂದತ್ತಿ ನೀಡಿದನು. ಕನ್ನಡ ಮತ್ತು ಸಂಸ್ಕೃತದಲ್ಲಿ ಉದ್ದಾಮಪಂಡಿತರಾಗಿದ್ದ ರಾಘವೇಂದ್ರ ರಾಯರು 'ತಂತ್ರಸಾರ' ಮತ್ತು ದೇವರ ನಾಮಗಳನ್ನು ತಮ್ಮ 'ವೇಣುಗೋಪಾಲ' ಎಂಬ ಅಂಕಿತನಾಮದಲ್ಲಿ ರಚಿಸಿದ್ದಾರೆ.



Scanned with CamScanner

## 2) ಕನಕದಾಸರು (ಕ್ರಿ.ಶ.1510–1603):ಹಂಪಿ



ಕನಕದಾಸರು ಕರ್ನಾಟಕದ ಹರಿದಾಸ ಭಕ್ತಶ್ರೇಷ್ಠರಲ್ಲೊಬ್ಬರು. ಇವರು ಹುಟ್ಟಿದುದು ಧಾರವಾಡ ಜಿಲ್ಲೆಯ ಬಂಕಾಪುರ ತಾಲ್ಲೂಕಿನ ಬಾಡ ಗ್ರಮದಲ್ಲಿ. ಬೀರಪ್ಪನಾಯಕ ಮತ್ತು ಬಚ್ಚಮ್ಮ ಇವರ ತಂದೆ ತಾಯಿಗಳು. ಬಹುಕಾಲದ ನಂತರ ತಿರುಪತಿಯ ತಿಮ್ಮಪ್ಪನ ಕೃಪೆಯಿಂದ ಹುಟ್ಟಿದ ಮಗನಿಗೆ ತಂದೆತಾಯಿಗಳಿಟ್ಟ ಮೊದಲ ಹೆಸರು ತಿಮ್ಮಪ್ಪ ಅಥವಾ ವೆಂಕಟೇಶ.

ಬೀರಪ್ಪನಾಯಕನ ಜಾತಿ ಯಾವುದೆಂಬುದು ನಿಖರವಾಗಿ ತಿಳಿದಿಲ್ಲ. ಕುರುಬ, ನಾಯಕ (ಬೇಡ), ಕಬ್ಬಲಿಗೆ ಈ ಜಾತಿಗಳೊಂದರಲ್ಲಿ ಅವರು ಸೇರಿರಬೇಕೆಂದು ಊಹಿಸಲಾಗಿದೆ. ಮೂಲತಃ ಇವರು ಶೈವರಾಗಿದ್ದರೆಂದು ಹೇಳುವುದುಂಟು. ರಾಮಾನುಜಾಚಾರ್ಯರ ಕಾಲದಲ್ಲಿ ವೈಷ್ಣವರಾಗಿರಬೇಕೆಂದು ಊಹಿಸಲಾಗಿದೆ. ಬೀರನಾಯಕ ಆ ಭಾಗದ 75 ಹಳ್ಳಿಗಳ ಮುಖಂಡ ಅಥವಾ ನಾಯಕನಾಗಿದ್ದನು. ಪಾಳೆಗಾರನ ಮಗನಾಗಿದ್ದ ತಿಮ್ಮನಾಯಕನಿಗೆ ಸಂಸ್ಕೃತ, ಮಹಾಕಾವ್ಯ, ವೇದ ಪುರಾಣಗಳ ಅಧ್ಯಯನ ಲಭಿಸಿದ್ದಿತು. ಇದು ಮುಂದೆ ಅವರು ಕನಕದಾಸರಾಗಿ ರಚಿಸಿದ ಕೀರ್ತನೆ, ಕಾವ್ಯ ಮತ್ತು ಪದಗಳಿಗೆ ಭದ್ರ ಬುನಾದಿಯನ್ನು ಒದಗಿಸಿದ್ದಿತು. ತಿಮ್ಮಪ್ಪ ಇನ್ನೂ ಪ್ರಾಪ್ತ ವಯಸ್ಕನಾಗುವ ಮುನ್ನವೆ ಅವನ ಮಾತಾಪಿತರು ಕಾಲವಾದರು. ಪರಿಣಾಮವಾಗಿ, ತಿಮ್ಮಪ್ಪ ತೊಂದರೆಗೊಳಗಾದನು. ಅವನ ಸಂಬಂಧಿಗಳು ಅವನ ಆಸ್ತಿಯನ್ನು ದೋಚಿದರು. ಇಂತಹ ಕಡುಕಷ್ಟದಲ್ಲಿರುವಾಗ ತಿಮ್ಮಪ್ಪನಿಗೆ ಭೂಗತವಾಗಿದ್ದ ನಿಧಿ (ಕನಕ) ಗೃಹ ನಿರ್ಮಾಣ ಕಾಲದಲ್ಲಿ ದೊರೆಯಿತು. ಪ್ರಾಪ್ತವಾದ ನಿಧಿಯನ್ನು ದೀನದಲಿತರಿಗೆ ಹಂಚಿದ ತಿಮ್ಮಪ್ಪ ಮುಂದೆ ಕನಕನಾಯಕನೆಂದು ಪ್ರಚುರಗೊಂಡನೆಂದು ಹೇಳಲಾಗಿದೆ.

ಸಂಪತ್ತು ಪ್ರಾಪ್ತವಾದ ಮೇಲೆ ಕನಕನಾಯಕನಾದ ತಿಮ್ಮಪ್ಪ ತನ್ನ ಪರೋಪಕಾರ ಹಾಗೂ ಪ್ರೀತಿ ವಾತ್ಸಲ್ಯ ಗುಣದಿಂದ ಜಾನಾನುರಾಗಿಯಾದನು. ಇಷ್ಟಲ್ಲದೆ ಭಕ್ತಿಭಾವವುಳ್ಳವನೂ ಆಗಿದ್ದನು. ಒಮ್ಮೆ ಕನಸಿನಲ್ಲಿ ಕಂಡ ಆದಿಕೇಶವನ ಆದೇಶದಂತೆ ತನ್ನ ಊರಿನ ನಿರ್ಲಕ್ಷ್ಯ ಸ್ಥಳವೊಂದರಲ್ಲಿ ಮೂಲೆ ಗುಂಪಾಗಿ ಬಿದ್ದಿದ್ದ ಆದಿಕೇಶವನ ವಿಗ್ರಹವನ್ನು ಕಾಗಿನೆಲೆ ಎಂಬಲ್ಲಿ ಪ್ರತಿಷ್ಠಾಪಿಸಿದನು. ಇದರಿಂದ ಕನಕನ ಕೀರ್ತಿ ಮತ್ತು ಹೆಚ್ಚುತ್ತಾ ಹೋಯಿತು. ಇವನ ವಿಚಾರವನ್ನು ತಿಳಿದ ಅಂದಿನ



Scanned with CamScanner

ವಿಜಯನಗರ ಸಾಮ್ರಾಜ್ಯದ ಅರಸ ವೀರಸಿಂಹ ಕನಕನನ್ನು ಬಂಕಾಪುರ ಪ್ರಾಂತ್ಯಕ್ಕೆ ಡಣ್ಣಾಯಕನನ್ನಾಗಿ (ಆಯಕಟ್ಟಿನ ಸ್ಥಳದ ಕಾದಿಟ್ಟ ಸೈನ್ಯದ ದಳಪತಿ) ಅಥವಾ ದಂಡನಾಯಕ ನೇಮಿಸಿದ್ದ.

ಕನಕನಾಯಕ "ದಾಸ"ನಾಗುವುದಕ್ಕಿಂತ ಮುಂಚೆ ದೊರೆಯಾಗಿದ್ದನೆಂಬುದನ್ನು (ಅಧಿರಾಜ) ಅವರ ಹಾಡಿನಲ್ಲಿ ಗುರುತಿಸಬಹುದಾಗಿದೆ. ಅದು ಹೀಗಿದೆ :

- **ದೊರೆತನವ ಬಿಡಿಸಿ ಸುಸ್ಥಿರಮಾರ್ಗ ತೋರಿಸಿದೆ,**

  **ನರಮಾತ್ರದವನೆನದೆ ಹರಿಯೆ!**

---

- **ಪರಬಲವ ನೋಡಿದರೆ ಹುರಿದುರಿದು ಬೀಳ್ವ ಮನ**

  **ಸೆರೆಹಾಕಿ ನಿಲಿಸಿದೆಯೊ ಹರಿಯೆ!**

ವೀರ ಯೋಧನಾಗಿ ಶತ್ರುಗಳ ಶಿರ ಚೆಂಡಾಡಿ ರಕ್ತ ಕೋಡಿ ಹರಿಸುವ ಈ ಕನಕನಾಯಕನು ಕನಕ ದಾಸರಾಗಿ ಪರಿವರ್ತನೆಗೊಂಡ ಬಗ್ಗೆ ಈ ಮೇಲಿನ ಕೀರ್ತನೆ ಬಿಟ್ಟರೆ ನಿಖರವಾದ ಬೇರಾವ ಆಧಾರ ಇಲ್ಲವಾಗಿದೆ. ಆ ಬಗ್ಗೆ ಹೇಳಿಕೆಯೊಂದು ಈ ರೀತಿ ಇದೆ.

ಕಾಗಿನೆಲೆಯಲ್ಲಿ ಪ್ರತಿಷ್ಠಾಪಿತವಾದ ಆದಿಕೇಶವ ಕನಕನ ಇಷ್ಟದೈವ. ತನ್ನ ಇಷ್ಟದೈವ ಇಚ್ಛೆಯಂತೆ ಅವನು ದಾಸನಾಗಲು ಹಿಂಜರಿಯುತ್ತಿದ್ದ. ಡನ್ನಾಯಕನಾದ ಕನಕ ಒಮ್ಮೆ ಕದನ ವೊಂದರಲ್ಲಿ ಶತ್ರುವಿನ ಹೊಡೆತಕ್ಕೆ ಸಿಕ್ಕಿ ಅರೆಜೀವವಾಗಿ ಬಿದ್ದಿದ್ದ. ಆ ಸಮಯದಲ್ಲಿ ಆದಿಕೇಶವನ ಆದೇಶವನ್ನು ಸ್ವೀಕರಿಸಿ ಅವನ ದಾಸನಾಗಲು ಸಮ್ಮತಿಸಿದನಂತೆ. ಈ ಹೇಳಿಕೆಯ ಸಮರ್ಥನೆಗೆ ಅವರ ಈ ಹಾಡೊಂದು ಪುಷ್ಟಿ ನೀಡುತ್ತದೆ.

- **ರಣದೊಳಗೆ ದೇಹವ ಖಂಡತುಂಡವ ಮಾಡಿ ।**

  **ರಣವನ್ನುತ್ತರಿಸಿ ಮರಣವ ತೋರಿದೆ ॥**

- **ಪ್ರಣವಗೋಚರನಾಗಿ ಲೀಲೆಯೊಂದರಲ್ಲಿ ಬಂದು**

  **ಹಣಕೆ ಪ್ರಾಣವನು ತಂದಿತ್ತ ಮಹಾತುಮನೆ ॥**



Scanned with CamScanner

ದಾಸರಾಗಿ ರೂಪುಗೊಂಡ ಕನಕನಾಯಕ ತಿರುಪತಿ, ಶ್ರೀರಂಗ, ಬೇಲೂರು, ಉಡುಪಿ, ಆಹೋ ಬಲ, ಕಂಚಿ, ಮೇಲುಕೋಟೆ ಮೊದಲಾದ ಸ್ಥಳಗಳಲ್ಲಿ ವ್ಯಾಪಕವಾಗಿ ಸಂಚರಿಸಿದರು. ತಿರುಪತಿಗೆ ಆಗಮಿಸಿದಾಗ ಕನಕ ಅಲ್ಲಿನ ತಿರುಮಲ ತಾತಾಚಾರ್ಯರಿಂದ ಹರಿದಾಸ ದೀಕ್ಷೆ ಪಡೆದರು. ಅವರ ಜೊತೆಗಿದ್ದ ಅನೇಕ ಕುರುಬರಲ್ಲದೆ ಇತರ ಜಾತಿಯವರು ವೈಷ್ಣವ ದೀಕ್ಷೆ ಪಡೆದರು. ಅನಂತರದಲ್ಲಿ ಕನಕದಾಸರು ವ್ಯಾಸರಾಯರಿಂದ (ತೀರ್ಥ) ಮಂತ್ರೋಪದೇಶ ಪಡೆಯಲು ಕೋರಿದರು. ಆದರೆ ವ್ಯಾಸರಾಯರು ಕುರುಬನಿಗೆಂತ ಮಂತ್ರೋಪದೇಶ ಎಂದು ತಾತ್ಸಾರದಿಂದ 'ಓಂ ಕೋಣಾಯನಮಃ' ಎಂಬುದಾಗಿ ಉಚ್ಚರಿಸಿದರಂತೆ. ಅದನ್ನೇ ಕನಕದಾಸರು ಮಂತ್ರೋಪದೇಶವೆಂದು ಪರಿಗಣಿಸಿ ನೂರೆಂಟು ಬಾರಿ ಪಠಿಸಿದರು. ತಕ್ಷಣವೇ ಸಮೀಪದ ಭಾರಿ ಗಾತ್ರದ ಬಂಡೆಯೊಂದು ಕೋಣದ ರೂಪ ಪಡೆಯಿತಂತೆ ಅದನ್ನು ವ್ಯಾಸರಾಯರ ಅವಗಾಹನೆಗೆ ತಂದಾಗ ತಮ್ಮ ಸಣ್ಣತನದಿಂದ ಹೊರಬರದ ವ್ಯಾಸರಾಯರು ಕನಕದಾಸರ ದೈವಭಕ್ತಿಯ ಶಕ್ತಿಯನ್ನು ಅಂದಾಜಿಸಿ ಅವರಿಗೆ ಮಂತ್ರೋಪದೇಶ ಮಾಡಿದರಂತೆ. ಇದೊಂದು ದಂತಕಥೆಯಾದರು ಅದರಲ್ಲಿ ನೀತಿಯೊಂದು ವ್ಯಾಸರಾಯರ ಮೂಲಕ ವ್ಯಕ್ತವಾಗಿದೆ. ವಿಜಯನಗರದಲ್ಲಿ ಕೃಷ್ಣದೇವರಾಯನ ಗುರುಗಳಾಗಿ ವಾಸ್ತವ್ಯ ಹೂಡಿದ್ದ ಶ್ರೀ ವ್ಯಾಸರಾಯರ ಮಹಿಮೆಯನ್ನು ಕೇಳಿದ್ದ ಕನಕದಾಸರು ಅವರಲ್ಲಿ ಹೋಗಿ ಶಿಷ್ಯತ್ವವನ್ನು ಪಡೆದು ಗುರುಮಂತ್ರ ಸ್ವೀಕರಿಸಿದರು. ಶ್ರೀ ವ್ಯಾಸರಾಯರ ಶಿಷ್ಯವೃಂದದಲ್ಲಿದ್ದು ಕನಕದಾಸರು ಹಲವು ಪವಾಡಗಳನ್ನು ನಡೆಸಿದರೆಂದು ಹೇಳುವುದುಂಟು. ಇವರ ಸೂಕ್ಷ್ಮ ಪ್ರಜ್ಞೆಯನ್ನು ಅರಿತ ಶ್ರೀ ವ್ಯಾಸರಾಯರು ಹಾಗೂ ಪುರಂದರದಾಸರು ಅವರಿಗೆ ಪ್ರಾಶಸ್ತ್ಯ ಕೊಟ್ಟಿದ್ದರು. ಇದರಿಂದ ಉಳಿದ ಶಿಷ್ಯರು ಮನದಲ್ಲೇ ಕರುಬುತ್ತಿದ್ದರು. ಈ ಅಂಶಃ

**ಕನಕದಾಸನ ಮೇಲೆ ದಯಮಾಡಲು**

**ವ್ಯಾಸಮುನಿ ಮಠದವರೆಲ್ಲ ದೂರಿಕೊಂಬರೋ ॥**

ಎಂಬ ಶ್ರೀ ಪುರಂದರದಾಸರ ಪಲ್ಲವಿಯಿಂದ ವೇದ್ಯವಾಗುತ್ತದೆ.

## ಕನಕನ ಕಿಂಡಿ

ತಿರುಪತಿಯಿಂದ ಉಡುಪಿಗೆ ಹೋದ ಕನಕದಾಸರು ಅಲ್ಲಿನ ಶ್ರೀ ಕೃಷ್ಣನ ದರ್ಶನಕ್ಕಾಗಿ ಪರಿತಪಿಸಿದರಂತೆ ಅವರು ಹುಟ್ಟಿನಿಂದ ಬ್ರಾಹ್ಮಣರಲ್ಲದ್ದರಿಂದ ದೇವಾಲಯದೊಳಕ್ಕೆ ಪ್ರವೇಶ ಲಭ್ಯವಾಗಲಿಲ್ಲ. ದೂರದಿಂದ ನೀಡಲು ದೇವರ ಮಹಾಪೂಜೆಯ ವೇಳೆ ಜನಸಂದಣಿ ಬೇರೆ. ಹಾಗಾಗಿ ಖಿನ್ನರಾದ ಕನಕದಾಸರು ದೇವಸ್ಥಾನದ ಗರ್ಭಗೃಹದ ಹಿಂಬದಿಗೆ ಹೋಗಿ ದರುಶನಕ್ಕಾಗಿ



Scanned with CamScanner

ಪ್ರಾರ್ಥಿಸಲಾಗಿ ಹಿಂಭಾಗದ ಗೋಡೆ ಬಿರಿದು ಪೂರ್ವಾಭಿಮುಖವಾಗಿದ್ದ ಕೃಷ್ಣನ ವಿಗ್ರಹ ಪಶ್ಚಿಮಕ್ಕೆ ತಿರುಗಿ ನಿಂತಿತಂತೆ. ಆ ವೃತ್ತಾಂತವನ್ನು ಹೇಳುವ ದೇವಾಲಯದ ಹಿಂದಿನ ಕಿಂಡಿಯನ್ನು ಇಂದಿಗೂ ಕನಕನ ಕಿಂಡಿಯೆಂದೇ ಹೇಳುವ ಐತಿಹ್ಯವಿದೆ.

ಕನಕದಾಸರ ಒಂದು ವೈಶಿಷ್ಟ್ಯವೆಂದರೆ ಅವರು ಮಾಡುತ್ತಿದ್ದ, ಚಿಂತಿಸುತ್ತಿದ್ದ ಕೆಲಸ ಹಾಗೂ ವಿಚಾರಗಳನ್ನೆಲ್ಲ ಕೀರ್ತನೆ ರೂಪದಲ್ಲಿ ಪೋಣಿಸಿ ಹೇಳುತ್ತಿದ್ದುದು. ಹಾಗೆ ಹೇಳುವಾಗ ಕಡೆಯಲ್ಲಿ ಆದಿಕೇಶವನ ಹೆಸರು ಸ್ಮರಿಸುವರು. ಮುಂದೆ "ಶ್ರೀ ಆದಿಕೇಶವ" ಅವರ ಎಲ್ಲ ಕೀರ್ತನೆಗಳ ಅಂಕಿತ ನಾಮವಾಗಿ ಉಳಿಯಿತು. ಇವರು ಕೇವಲ ಕೀರ್ತನೆಗಳನ್ನು ರಚಿಸಿ ಹಾಡಿದ ಹರಿದಾಸರು ಮಾತ್ರವಲ್ಲದೆ ಕಾವ್ಯಗಳನ್ನು ರಚಿಸಿರುವ ಕವಿಯೂ, ಸಮಾಜದ ಮೂಢನಂಬಿಕೆಗಳಾದ ಜಾತಿ ಕುಲಗಳ ಮೂಲವನ್ನು ಬಯಲಿಗೆಳೆದ ಸುಧಾರಕರೂ ಆಗಿದ್ದರು.

ಹೀಗೆ ದಾಸರಾಗಿ ರೂಪುಗೊಂಡ ಕನಕದಾಸರು ಜೀವಿತ ಕಾಲವನ್ನೇಲ್ಲ ಹರಿಸ್ಮರಣೆಯಲ್ಲೆ ಕಳೆದು ತಮ್ಮ ತೊಂಬತ್ತೆಂಟನೇ ವಯಸ್ಸಿನಲ್ಲಿ ಕಾಗಿನೆಲೆಯ ಆದಿಕೇಶವ ವಿಗ್ರಹದಲ್ಲಿ ಲೀನವಾದರೆಂದು ಹೇಳುತ್ತಾರೆ.

## 3) ವಿಜಯದಾಸರು 91604–70) ಮಾನ್ವಿ, (ರಾಯಚೂರು)




ದಾಸಕೂಟದ ಕವಿ–ಸಂತರಲ್ಲಿ ಎದ್ದು ಕಾಣುವ ಹೆಸರು ವಿಜಯದಾಸರು. ಮಾನ್ವಿ ಬಳಿಯ ಚಿಕ್ಕರಬಕವಿಯಲ್ಲಿ ಜನಿಸಿದರು. ಇವರು ವಾದಿರಾಜರ ಶಿಷ್ಯರಾದರು. ಪುರಂದರದಾಸರ ಕೊನೆಯ ಮಗ ಮಧ್ವಪತಿಯ ಅವತಾರ ಇವರೆಂದು ನಂಬಲಾಗಿದ್ದಿತು. ಸಂಸ್ಕೃತ ಮತ್ತು ಕನ್ನಡದಲ್ಲಿ ಘನ ವಿದ್ವಾಂಸರಾಗಿದ್ದರು. ಇವರ ಕನಸಿನಲ್ಲಿ ಕಾಣಿಸಿಕೊಂಡ ಪುರಂದರದಾಸರು 2500 ಕೀರ್ತನೆಗಳನ್ನು ರಚಿಸುವಂತೆ ಕೇಳಿಕೊಂಡರಂತೆ. 5 ಲಕ್ಷ ಕೀರ್ತನೆಗಳನ್ನು ರಚಿಸುವ ಉದ್ದೇಶವನ್ನಿಟ್ಟುಕೊಂಡಿದ್ದ ಪುರಂದರದಾಸರು ತಮ್ಮ ಜೀವಿತ ಕಾಲದಲ್ಲಿ 475000 ಕೀರ್ತನೆಗಳನ್ನು ರಚಿಸದ್ದರಷ್ಟೇ ಉಳಿದ 2500 ಕೀರ್ತನೆಗಳನ್ನು ರಚಿಸುವಂತೆ ಕೇಳಿಕೊಳ್ಳಲಾಗಿ ಅಷ್ಟನ್ನು ವಿಜಯದಾಸರು ರಚಿಸಿದರು. ವೇದ, ಉಪನಿಷತ್ತು, ಭಾಗವತ ಮತ್ತು ಪುರಾಣಗಳಿಂದ ಆಯ್ದ ಘಟನಾವಳಿಗಳನ್ನು ಆಧರಿಸಿ ಈ ಕೀರ್ತನೆಗಳನ್ನು ರಚಿಸಲಾಗಿದೆ.



Scanned with CamScanner

ಮಾರ್ಗ ಪೇಳುವೆ ಕೇಳು ಸ್ವರ್ಗ ಧಾರುಣಿಯಿಂದ
ನಿರ್ಗತನಾಗ್ಯ ಪವರ್ಗ ಸೇರುವುದಕ್ಕೆ
ಭಾರ್ಗವಿ ರಮಣನ್ನ ಮಾರ್ಗ ಪಿಡಿದುಕೋ
ಮಾರ್ಗ ಕಾಣದೆ ಪಾಪ ದುರ್ಗದೇಶವ ಸೇರವೆ
ದುರ್ಗುಣವುಳ್ಳ ಸಂಸರ್ಗ ಅದಲ್ಲದೆ
ದೀರ್ಘವಾದ ದುರ್ಘಟವಿದು ಕರ್ಮಾ
ಭಾರ್ಗವಿಗಾದರು ನಿರ್ಗಮಯೆಣಿಸಲು
ಮಾರ್ಗ ಸುಲಭ ಭಕ್ತಿ ಸರ್ಗನಾಗೊ
ನಿರ್ಗುಣ ಅವಿಕಾರಿ ವಿಜಯ ವಿಠ್ಠಲ ಭಕ್ತಿ
ವರ್ಗದೊಳಿಟ್ಟು ಬಂದು ದುರ್ಗತಿಪರಿಹರಿಪ

## 4) ಜಗನ್ನಾಥದಾಸರು (1728–1806) ರಾಯಚೂರು




ರಾಯಚೂರು ಜಿಲ್ಲೆಯ ಬ್ಯಾನಹಟ್ಟಿ ಎಂಬಲ್ಲಿ ಹುಟ್ಟಿದ ಇವರು ಕನ್ನಡ ಮತ್ತು ಸಂಸ್ಕೃತದಲ್ಲಿ ಉತ್ತಮ ವಿದ್ವತ್ತನ್ನು ಗಳಿಸಿದರು. ಸಂತರಾಗಿ ಅನೇಕ ಕೀರ್ತನೆಗಳನ್ನು ರಚಿಸಿದರು. ಅವುಗಳಲ್ಲಿ ಮುಖ್ಯವಾದವು 600 ತ್ರಿಪದಿಗಳು ಮತ್ತು 200 ಕೀರ್ತನೆಗಳು. ಅಲ್ಲದೆ ಭಾಮಿನಿಷಟ್ಪದಿಯಲ್ಲಿ ಹರಿಕಥಾಮೃತ ಸಾರವನ್ನು ರಚಿಸಿದ್ದಾರೆ.

ಕಾದ ಕಬ್ಬಿಣ ಹಿಡಿದು ಬಡಿಯಲು
ವೇದನೆಯು ಲೋಹಗಳಿಗಲ್ಲದೆ
ಆದುದೇನೈ ಅನಲಗಾವ್ಯಥೆಯೇನ ಮಾಡಿದರೂ ॥

ಆದಿದೇವನು ಸರ್ವ ಜೀವರ
ಕಾದುಕೊಂಡಿಹನೊಳ ಹೊರಗೆ ದು:
ಖಾದಿಗಳ ಸಂಬಂಧವಾಗುವುದೇನೊ ಚಿನ್ಮಯಗೆ ॥

ಅರಿತವರಿಗತಿಸುಲಭ ಹರಿಯ ಪೂಜೆ
ಅರಿಯದವ ನಿರ್ಭಾಗ್ಯ ನರಲೋಕದೊಳಗೆ



Scanned with CamScanner

ಹೈಮಾಂಡ ಮಂಟಪವು ಭೂಮಂಡಲವೆ ಪೀಠ
ಸೋಮ ಸೂರ್ಯರೆ ದೀಪ ಭೂರುಹಗಳು
ಚಾಮರಗಳತಿವಿಮಲ ವ್ಯೋಮ ಮಂಡಲ ಛತ್ರ
ಯಾಮಾಷ್ಟಕಗಳಷ್ಟದಳದ ಪದ್ಮ ವುಯೆಂದು

## ಹರಿದಾಸರ ಸಾಮಾಜಿಕ ಮತ್ತು ಧಾರ್ಮಿಕ ಕೊಡುಗೆಗಳು

ಮಾನವ ನಾಗರಿಕನಾದಂತೆ ಅವನ ಸಾಮಾಜಿಕ ವ್ಯವಸ್ಥೆ ಕೂಡ ವಿಸ್ತೃತಗೊಳ್ಳುತ್ತದೆ. ಕಾಲಚಕ್ರದಲ್ಲಿ ಅದು ಸರಿದಂತೆ ಹಲವು ಲೋಪದೋಷಗಳು ಅದರಲ್ಲಿ ಮೂಡುವುದು ಸಹಜ. ಅಂತಹ ದೋಷಗಳನ್ನು ನಿವಾರಣೆ ಮಾಡಿಕೊಂಡಲ್ಲಿ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಆ ಮೂಲಕ ಮಾನವ ತನ್ನೆಲ್ಲ ಉದಾತ್ತ ಧ್ಯೇಯೋದ್ದೇಶಗಳನ್ನು ಆಸೆ-ಆಕಾಂಕ್ಷೆಗಳನ್ನು ಸಾಧಿಸಿಕೊಳ್ಳಬಲ್ಲ. ಆದರ್ಶ ಸಮಾಜ ನಿರ್ಮಿಸಬಲ್ಲ; ಮುಕ್ತಿಯನ್ನು ಕಾಣಬಲ್ಲ. ಸಾಮಾಜಿಕ ಕಟ್ಟುಪಾಡುಗಳು, ಧಾರ್ಮಿಕ ನಂಬಿಕೆಗಳು ಜಟಿಲವಾದಾಗ ಅದರ ಪ್ರಗತಿಗೆ ಗ್ರಹಣ ಬಡಿಯುತ್ತದೆ. ಅಂತಹ ಸರಿ ವೇಳೆಯಲ್ಲಿ ಆವತರಿಸಿದ ಹಲವು ಸಮಾಜ ಸುಧಾರಕರು, ಧರ್ಮ ಬೋಧಕರು ಮತ್ತು ದಾರ್ಶನಿಕರು ಈ ನಾಡಿನಲ್ಲಿ ಹಳಿತಪ್ಪಿದ ಸಾಮಾಜಿಕ ವ್ಯವಸ್ಥೆಯನ್ನು ಸರಿದಾರಿಯಲ್ಲಿ ತರುವ ಪ್ರಯತ್ನ ಮಾಡಿದ್ದಾರೆ. ಕ್ರಿ.ಶ. ಹನ್ನೆರಡು-ಹದಿಮೂರನೆಯ ಶತಮಾನಗಳಲ್ಲಿ ಅಂತಹ ಮಹತ್ಕಾರ್ಯವನ್ನು ಶಿವಶರಣರು ಕೈಗೊಂಡರು. ಅನಂತರ ಇಂಹುದೇ ಕಾರ್ಯ ಕೈಕೊಂಡವರು ಹರಿದಾಸರು. ಅವರಲ್ಲಿ ಹದಿನೈದು ಮತ್ತು ಹದಿನಾರನೇ ಶತಮಾನದಲ್ಲಿ ಅವತರಿಸಿದ ವ್ಯಾಸರಾಯರು, ಪುರಂದರದಾಸರು ಮತ್ತು ಕನಕದಾಸರು ಪ್ರಮುಖರು. ಅಂದಿನ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಜನತೆಯ ಅಜ್ಞಾನಕ್ಕೆ ದೀಪ ಹಿಡಿದ ಇವರ ಕೊಡುಗೆಯನ್ನು ಈ ಕ್ಷೇತ್ರಗಳಲ್ಲಿ ಕಾಣಬಹುದು.

### ಸಾಮಾಜಿಕ ಕೊಡುಗೆ

ಸಮಾಜದ ಕೈಗನ್ನಡಿ ಸಾಹಿತ್ಯ ಹರಿದಾಸ ಸಾಹಿತ್ಯದಲ್ಲಿ ಅಂದಿನ ಸಮಾಜದ ಲೋಪದೋಷಗಳ ಚಿತ್ರ ದೊರೆಯುತ್ತದೆ. ಹರಿದಾಸರು ತಮ್ಮ ಜೀವಿತ ಕಾಲದಲ್ಲಿ ಸಮಾಜದಲ್ಲಿನ ಅನೀತಿಗಳನ್ನು ಬಹಿರಂಗಗೊಳಿಸಿ ಖಂಡಿಸಿದ್ದಾರೆ. ಪ್ರವಾಸ ಕೈಗೊಂಡು ಮದನಪಲ್ಲಿಯಲ್ಲಿ ಸ್ವಲ್ಪ ಕಾಲ ತಂಗಿದ್ದ ವ್ಯಾಸರಾಯರು ಜನತೆಯ ಒಳಿತಿಗಾಗಿ ಅಲ್ಲಿ ಒಂದು ದೊಡ್ಡ ಕೆರೆ ನಿರ್ಮಾಣ ಮಾಡಿದರು. ಅದನ್ನು ಇಂದಿಗೂ ವ್ಯಾಸರಾಯ ಸಮುದ್ರವೆಂದು ಕರೆಯುತ್ತಾರೆ.



Scanned with CamScanner

ತನ್ನ ಸಂಪತ್ತೆಲ್ಲ ದಾನ ಮಾಡಿ ನಿರ್ಗತಿಕನಾಗಿ ಹರಿಸ್ಮರಣೆ ಮಾಡುತ್ತ ಬೀದಿಗಳಲ್ಲಿ ಹೊರಟ ಪುರಂದರದಾಸರು ವೈರಾಗ್ಯ ತಾಳಲಿಲ್ಲ. ಹೆಂಡತಿ ಮಕ್ಕಳನ್ನು ದೂರ ಸರಿಸಲಿಲ್ಲ. ಅವರೊಡನಿದ್ದು ಬಡತನದ ಬೇಗೆಯಲ್ಲಿ ಬೆಂದರು. ಸಂಸಾರದಿಂದ ಓಡಿ ಹೋಗು ಎಂದು ಯಾವ ದಾಸರೂ ಹೇಳಲಿಲ್ಲ. ಪುರಂದರದಾಸರು ನಿರಾಶಾವಾದಿಗಳಲ್ಲ. ಅದಕ್ಕೆ ಬದಲಾಗಿ "ಈಸಬೇಕು ಇದ್ದು ಜೈಸಬೇಕು", "ಮಾನವ ಜನ್ಮ ದೊಡ್ಡದು, ಇದು ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ" ಎಂಬ ಆಶಾದಾಯಕ ನುಡಿಯಿಂದ ಸಾರ್ಥಕ ಜೀವನಕ್ಕೆ ಹುರಿದುಂಬಿಸಿದ್ದಾರೆ.

ಮಾನವನು ಸಮಾಜ ಜೀವಿ ಇತರರೊಡನೆ ಅವನು ಹೇಗೆ ಬಾಳಬೇಕೆಂಬುದನ್ನು ದಾಸರು ಒತ್ತಿ ಹೇಳಿದ್ದಾರೆ. ಅವರ ಕೀರ್ತನೆಗಳು ನೀತಿಯ ನೆಲೆಗಟ್ಟಿನ ಮೇಲೆ ನಿಂತಿವೆ. ಅದರಲ್ಲೂ ಸ್ತ್ರೀಯರ ಜೀವನವನ್ನು ಅತಿ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಆಕೆಯನ್ನು ತಾಯಿಯಾಗಿ, ಮಡದಿಯಾಗಿ, ಸೊಸೆಯಾಗಿ, ಮಗಳಾಗಿ, ಅಕ್ಕ–ತಂಗಿಯಾಗಿ ಅವಳು ವಹಿಸುವ ಕರ್ತವ್ಯ ಹೊಣೆಗಾರಿಕೆಯನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಧರ್ಮದ ಹೆಸರಿನಲ್ಲಿ ಭ್ರಷ್ಟಾಚಾರವೆಸಗುವ ಧರ್ಮ ಗುರುಗಳು, ಡಾಂಭಿಕರು ಮತ್ತು ಮಡಿವಂತಿಕೆಯ ಕಪಟ ಆಚಾರವಂತರನ್ನು ಉದ್ದೇಶಿಸಿ "ಇವೆಲ್ಲ ಉದರವೈರಾಗ್ಯ"ವೆಂದು (ಹೊಟ್ಟೆಪಾಡಿಗೆ) ಮೂದಲಿಸಿದ್ದಾರೆ.

"ನಾನು ಮೇಲು ನೀನು ಕೀಳು" ಎಂಬ ಸಂಕುಚಿತ ಮನೋಭಾವದಿಂದುಂಟಾಗುವ ಸಂಘರ್ಷಗಳಿಂದ ಕೂಡಿದ ಅಂದಿನ ಸಮಾಜವನ್ನು ತಿದ್ದಲು ದಾಸರು ಪ್ರಯತ್ನಿಸಿದ್ದಾರೆ. ಅಂತಹ ಒಂದು ನಿದರ್ಶನ ಕನಕದಾಸರ ಈ ಕೀರ್ತನೆಯಿಂದ ವೇದ್ಯವಾಗುತ್ತದೆ.

**ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ**

**ಕುಲದ ನೆಲೆಯನೇನಾದರು ಬಲ್ಲಿರಾ**

**ಆತ್ಮ ಯಾವ ಕುಲ ಜೀವ ಯಾವ ಕುಲ?**

............................................................

............................................................

**ಜಲವೆ ಸಕಲ ಕುಲಕ್ಕೆ ತಾಯಲ್ಲವೆ**

**ಜಲದ ಕುಲವೇನಾದರೂ ಬಲ್ಲಿರಾ?**



Scanned with CamScanner

ಹಸುವಿನ ಮಾಂಸದೊಳ್ಳುತ್ಪತ್ತಿಯಾದ್ದ ಕ್ಷೀರವ

ವಸುಧೆಯೊಳಗೆ ಭೂಸುರರುಣಲಿಲ್ಲವೆ?

ಇಂತಹ ಹಲವು ನುಡಿಮುತ್ತುಗಳಿಂದ ದಾಸರು ಅಂದಿನ ಜಾತಿಭೇದಗಳನ್ನು ಖಂಡಿಸಿ ಸರ್ವಧರ್ಮ ಸಮಾನತೆಯನ್ನು ಎತ್ತಿ ಹಿಡಿದಿದ್ದಾರೆ. ಬೂಟಾಟಿಕೆಯ ಜನತಪಾನುಷ್ಠಾನ ಮಾಡುವವರನ್ನು ಅರ್ಥವರಿಯದ ವೇದಮಂತ್ರ ಪಠಿಸುವವರನ್ನು ಕುರಿತು ಕನಕದಾಸರು ಹೀಗೆ ಟೀಕಿಸಿದ್ದಾರೆ.

ಜಪವ ಮಾಡಿದರೇನು, ತಪವ ಮಾಡಿದರೇನು

ಕಪಟಗುಣ ವಿಪರೀತವಿದ್ದವೆನು?

ಹರಿದಾಸರು ತಮ್ಮ ತತ್ವಪದ ಮತ್ತು ನೀತಿಪದಗಳಲ್ಲಿ ಅಂದಿನ ಸಮಾಜದಲ್ಲಿ ಬೇರೂರಿದ್ದ ಜಾತಿಯ ಅಸಮತೆ, ಅಸ್ಪೃಶ್ಯತೆ, ಬಹುಪತ್ನಿತ್ವ, ಶೂದ್ರ ವರ್ಗಗಳ ಶೋಷಣೆ, ಸತಿ ಪದ್ಧತಿ, ಬಾಲ್ಯ ವಿವಾಹ ಪದ್ಧತಿ, ದೇವದಾಸಿ ಪದ್ಧತಿ, ವೇಶ್ಯಾ ಪದ್ಧತಿ, ನರಬಲಿ, ಪ್ರಾಣಿ ಬಲಿ ಮೊದಲಾದ ಅನಿಷ್ಠ ಪದ್ಧತಿಗಳನ್ನು ನಿವಾರಿಸಲು ಪ್ರಯತ್ನಿಸಿದರು. ಶ್ರೀಮಂತರ ಆಡಂಬರ ಮತ್ತು ಡಂಬಾಚಾರಗಳನ್ನೂ ಖಂಡಿಸಿದರು.

ಜನಸಾಮಾನ್ಯನಿಗೆ ಕಬ್ಬಿಣದ ಕಡಲೆಯಾದ ವೇದ, ಶಾಸ್ತ್ರ, ಪುರಾಣಗಳ ನೀತಿಸುಧೆ ದಾಸರ ಈ ಕೀರ್ತನೆಗಳಲ್ಲಿ ಸುಲಭವಾಗಿ ತಿಳಿಯುವಂತಹುದಾಗಿವೆ. ಒಟ್ಟಿನಲ್ಲಿ ಹರಿದಾಸರು ಕೇವಲ ಭಕ್ತಿ ಪ್ರಧಾನ ಕೀರ್ತನೆಗಳನ್ನು ಮಾತ್ರವೆ ಬಳಸದೆ ಅಂದಿನ ಸಾಮಾಜಿಕ ನ್ಯೂನತೆಗಳನ್ನೂ ಖಂಡಿಸಿ ಹೊಸ ಸಮಾಜವೊಂದರ ಪ್ರಗತಿಗೆ ತಮ್ಮದೇ ಆದ ಕೊಡುಗೆ ಸಲ್ಲಿಸಿದ್ದಾರೆ.

## ಧಾರ್ಮಿಕ ಕ್ಷೇತ್ರದಲ್ಲಿ ಕೊಡುಗೆ

ಭಾರತ ಹಲವು ಧರ್ಮಗಳ ಅಗರವಾಗಿದೆ. ಅದರಲ್ಲಿ ಕರ್ನಾಟಕವಂತೂ ಭಕ್ತಿ ಪಂಥಗಳ ತವರೂರು ಎಂದೇ ಹೇಳಬೇಕು. ಆದಿಕಾಲದಿಂದಲೂ ಧರ್ಮೋಪದೇಶಕರು ಈ ಪುಣ್ಯಭೂಮಿಯನ್ನು ಆವತರಿಸಿ, ಪತನಗೊಳ್ಳುತ್ತಿದ್ದ ನಡತೆ, ಸಂಸ್ಕೃತಿ, ಪ್ರೀತಿ, ಪ್ರಾಮಾಣಿಕತೆ, ಕಾಯಕ ಮೊದಲಾದ ಜೀವನ ಮೌಲ್ಯಗಳಿಗೆ ಪುನಶ್ಚೇತನ ನೀಡಿದ್ದಾರೆ. ಹರಿದಾಸರು ತಮ್ಮ ತತ್ವಪದ ಮತ್ತು ನೀತಿಪದಗಳಲ್ಲಿ ಅಂದಿನ ಸಮಾಜದಲ್ಲಿ ಬೇರೂರಿದ್ದ ಜಾತಿಯ ಅಸಮತೆ, ಅಸ್ಪೃಶ್ಯತೆ, ಬಹುಪತ್ನಿತ್ವ,



Scanned with CamScanner

ಶೂದ್ರ ವರ್ಗಗಳ ಶೋಷಣೆ, ಸತಿ ಪದ್ಧತಿ, ಬಾಲ್ಯ ವಿವಾಹ ಪದ್ಧತಿ, ದೇವದಾಸಿ ಪದ್ಧತಿ, ವೇಶ್ಯಾ ಪದ್ಧತಿ, ನರಬಲಿ, ಪ್ರಾಣಿ ಬಲಿ ಮೊದಲಾದ ಅನಿಷ್ಟ ಪದ್ಧತಿಗಳನ್ನು ನಿವಾರಿಸಲು ಪ್ರಯತ್ನಿಸಿದರು. ಶ್ರೀಮಂತರ ಆಡಂಬರ ಮತ್ತು ಡಂಬಾಚಾರಗಳನ್ನೂ ಖಂಡಿಸಿದರು. ಧಾರ್ಮಿಕ ವಲಯದಲ್ಲುಂಟಾದ ನೈತಿಕ ಅಧಃ ಪತನವನ್ನು ಕಂಡ ಹರಿದಾಸರು ತಮ್ಮ ಕೀರ್ತನೆ ಹಾಗೂ ಹಾಡುಗಳಲ್ಲಿ ಎತ್ತಿ ತೋರಿಸಿದ್ದಾರೆ. ದೈವನಲ್ಲಿ ಅನನ್ಯ ಭಕ್ತಿ ಉಳ್ಳವರಾಗಿ ತನ್ನನ್ನೇ ಪೂರ್ಣ ಸಮರ್ಪಿಸಿಕೊಂಡಲ್ಲಿ ಮೋಕ್ಷ ಸಾಧನೆ ಸಾಧ್ಯ ಎಂಬುದನ್ನು ಎಲ್ಲ ದಾಸರೂ ತಮ್ಮ ಜೀವನದ ನಿದರ್ಶನಗಳಿಂದಲೇ ತೋರಿದ್ದಾರೆ. ಮೋಕ್ಷ ಸಾಧನೆಗೆ ಇನ್ನುಳಿದ ಮಾರ್ಗಗಳಾದ ಜ್ಞಾನಮಾರ್ಗ, ಕರ್ಮ ಮಾರ್ಗಗಳಿಗಿಂತ ಭಕ್ತಿ ಮಾರ್ಗ ಅತಿ ಸುಲಭ ಮತ್ತು ಸಾಮಾನ್ಯರೂ ಗ್ರಹಿಸಬಹುದಾದ ಮಾರ್ಗ ಎಂಬುದನ್ನು ದಾಸರು ಪ್ರಚುರಪಡಿಸಿದರು. ಧಾರ್ಮಿಕ ರಂಗದಲ್ಲಿದ್ದ ಆಡಂಬರ, ಕಪಟ ನಾಟಕೀಯ ನಡವಳಿಕೆಗಳನ್ನು ತೀವ್ರವಾಗಿ ಖಂಡಿಸಿದ ಅವರು ಸಾಮಾನ್ಯ ಜನತೆಯಲ್ಲಿ ದೈವದ ಬಗ್ಗೆ ಮತ್ತು ಮೋಕ್ಷದಲ್ಲಿ ನಂಬಿಕೆ ಹುಟ್ಟಿಸಿದರು. ದೈವರಾಧನೆಯಲ್ಲಿನ ಬೂಟಾಟಿಕೆಯನ್ನು ಕುರಿತು ಪುರಂದರದಾಸರು ಮನಃ ಶುದ್ಧಿಯಿಲ್ಲದೆ ಯಾವ ಮಂತ್ರೋಚ್ಚಾರಣೆಯೂ ಫಲ ನೀಡದು; ಯಾವ ತೀರ್ಥಸ್ನಾನವೂ ಪುಣ್ಯಪ್ರದವಾಗದು ಎಂಬ ಅಂಶವನ್ನು ತಮ್ಮ ಈ ಕೀರ್ತನೆಯಲ್ಲಿ ಎತ್ತಿ ತೋರಿಸಿದ್ದಾರೆ.

**ಮನಶುದ್ಧಿಯಿಲ್ಲದವನಿಗೆ ಮಂತ್ರದ ಫಲವೇನು**

**ತನುಶುದ್ಧಿಯಿಲ್ಲದವನಿಗೆ ತೀರ್ಥದ ಫಲವೇನು**

**ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ**

**ನಿಂದಲ್ಲಿ ಫಲವೇನು ಶ್ರೀಶೈಲದ ಕಾಗೆಯಂತೆ**

**ಹೊರಗೆ ಮಿಂದು ಒಳಗೆ ಮೀಯದವರ ಕಂಡು**

**ಬೆರಗಾಗಿ ನಗುತ್ತಿದ್ದ ಪುರಂದರವಿಠಲ**

ಎಂಬುದಾಗಿ ಚಿತ್ತಶುದ್ಧಿಯನ್ನು ಕುರಿತು ಹೇಳಿದ್ದಾರೆ. ಇನ್ನೊಂದು ಕೀರ್ತನೆಯಲ್ಲಿ ಮಡಿ ಮಡಿಯೆಂದು ಅಡಗಡಿಗೂ ಮಡಿಯುಟ್ಟು ಬರುವವರ ಬೂಟಾಟಿಕೆಯನ್ನು ಟೀಕಿಸುತ್ತಾರೆ. ಇಂಥ ಸಲ್ಲದ ವರ್ತನೆಯನ್ನು ಮೀನು, ಮೊಸಳೆ, ಕಪ್ಪೆ, ಕಾಗೆ ಮೊದಲಾದ ಪ್ರಾಣಿಗಳ ಸ್ಥಾನಕ್ಕೆ ಹೋಲಿಸಿ ಅದನ್ನು ಖಂಡಿಸಿ ಅಜ್ಞಾನಕ್ಕೆ ದೀಪ ಹಿಡಿದಿದ್ದಾರೆ. ಪುರಂದರದಾಸರು ವಿಷ್ಣುವನ್ನು



Scanned with CamScanner

ಕೊಂಡಾಡಿದರುವಷ್ಟೇ ಶಿವನನ್ನೂ ಕೂಡ ಹೊಗಳಿದ್ದಾರೆ. ಮನುಷ್ಯ ಹೇಗೆ ಬದುಕಬೇಕು ಎಂಬುದನ್ನು ತಮ್ಮ ತಿಳಿಯಾದ ಕನ್ನಡ ಕೀರ್ತನೆಗಳಲ್ಲಿ ಒಡ ಮೂಡಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ.

**'ಆಚಾರ ವಿಲ್ಲದ ನಾಲಿಗೆ, ನಿನ್ನ ನೀಚಬುದ್ದಿ ಬಿಡು ನಾಲಿಗೆ'**

**'ಜಾಲಿಯ ಮರದಂತೆ ಧರೆಯೊಳು ದುರ್ಜನರು**

..................................................................

**'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ ಜಗದೊಳಿರುವ**

**ಜಾಣರೆಲ್ಲ ಹಗರಣವ ಮಾಡುವುದನೆ ಕಂಡು' ಇತ್ಯಾದಿ**

ಕನಕದಾಸರು ಕೀರ್ತನೆಗಳೇ ಅಲ್ಲದೆ 'ಮೋಹನತರಂಗಿಣಿ,' 'ನಳಚರಿತ್ರೆ,' 'ಹರಿಭಕ್ತಿ ಸಾರ,' 'ರಾಮಧ್ಯಾನ ಚರಿತ್ರೆ' ಎಂಬ ನಾಲ್ಕು ಕಾವ್ಯಗಳನ್ನು ರಚಿಸಿದ್ದಾರೆ. ಕಾವ್ಯದೃಷ್ಟಿಯಿಂದ ಇತರ ದಾಸರ ಕೃತಿಗಳಿಗೆ ಹೋಲಿಸಿ ನೋಡಿದರೆ ಕನಕದಾಸರ ಕೃತಿಗಳು ಹೆಚ್ಚು ಹೃದಯಂಗಮವಾಗಿವೆ. ಕಥಾವಸ್ತುವಿನ ದೃಷ್ಟಿಯಿಂದಲೂ ಅವು ವಿಶಿಷ್ಟವಾಗಿವೆ. 'ಹರಿಭಕ್ತಿ ಸಾರ' ಅವರ ಆಧ್ಯಾತ್ಮಿಕ ದೃಷ್ಟಿಯೇನೆಂಬುದನ್ನು ತಿಳುಸುವುದಲ್ಲದೆ ಅವರ ಅಂತರಂಗವನ್ನೂ ಪರಿಚಯಿಸುತ್ತದೆ.

ಹರಿದಾಸರು ಕೇವಲ ಮಧ್ವಮತ (ಮಧ್ವಚಾರ್ಯರ ಪಂಥ) ಪ್ರಚಾರಕರು ಎಂಬ ಹೇಳಿಕೆಯುಂಟು. ಆದರೆ ಇದು ಸರಿಯಲ್ಲ. ಕೇವಲ ಮಧ್ವಮತ ಪ್ರಚಾರಕಾರ್ಯವನ್ನು ಅವರು ಕೈಗೊಂಡಿದ್ದರೆ ಹರಿದಾಸಪಂಥ ಎಲ್ಲ ಜನರನ್ನು ಆಕರ್ಷಿಸುವ ಮಟ್ಟ ಮುಟ್ಟುತ್ತಿರಲಿಲ್ಲ. ಮತಪ್ರಚಾರಕ್ಕಿಂತ ನೀತಿಬೋಧನೆ, ಶುದ್ಧಾಚರಣೆ ಮತ್ತು ಹರಿಭಕ್ತಿಸಾಧನೆ ಇಲ್ಲಿ ಪ್ರಮುಖವಾಗಿವೆ.

ಮುಂದೇನಾಗುತ್ತದೆ ಎಂದು ಯೋಚಿಸಿ ಕಳವಳಪಡಬೇಡ, ದೇವರು ಎಲ್ಲರನ್ನೂ ಕಾಪಾಡುತ್ತಾನೆ ಎಂದು ಧೈರ್ಯ ಹೇಳುವ ಹಾಡೊಂದು ಹೀಗೆದೆ:

**ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ**

**ಕಟ್ಟೆಯನು ಕಟ್ಟಿ ನೀರೆರೆದವರು ಯರೋ ?**

..........................................................

**ಕಲ್ಲೊಳಗೆ ಹುಟ್ಟಿ ಕೂಗುವ ಪ್ರಾಣಿ ಪಕ್ಷಿಗಳಿಗೆಲ್ಲ**

**ಅಲ್ಲಲ್ಲಿ ಆಹಾರವಿತ್ತವರು ಯಾರೋ ?**



Scanned with CamScanner

ಯಶಸ್ವಿಯಾಗಿದ್ದರು. ಶ್ರೀರಂಗಮಠದ ಪೂಜಾಕೈಂಕರ್ಯಗೈಯ್ಯುವ ವೇಳೆಯಲ್ಲಿ ವೇಣುಗೀತ ಮತ್ತು ಗೋಪಿಗೀತ ಹಾಡುಗಳನ್ನು ಹಾಡುತ್ತಿದ್ದವರು ಶ್ರೀಪಾದರಾಯರೇ.

ಹರಿದಾಸರು ದೇಶ ಸಂಚಾರ ಮಾಡುತ್ತ ತಾಳ-ತಂಬೂರಿಗಳನ್ನು ತಮ್ಮ ಕೀರ್ತನೆಗಳ ಜೋತೆ ಹೆಚ್ಚು ಬಳಕೆಗೆ ತಂದರು. ಇವನ್ನು ಹರಿಕಥಾ ವಿದ್ವಾನರೂ ಕೂಡ ಅಳವಡಿಸಿಕೊಂಡು ಜನಪ್ರಿಯ ಗೊಳಿಸಿದರು. ಮಾಧ್ವ ಪರಂಪರೆಯಲ್ಲಿ ಪೂಜಾವೇಳೆ ಜಾಗಟೆ ಬಾರಿಸುವುದು ಮಹತ್ವ ಪಡೆಯಿತು.

ವ್ಯಾಸಕೂಟ ಮತ್ತು ದಾಸಕೂಟದ ಸಂತಕವಿಗಳು ರಾಗ ಪ್ರಧಾನವಾದ ಉಗಾ-ಭೋಗ ಶೈಲಿಯ ಪದ್ಯಗಳನ್ನೂ ಮತ್ತು ತಾಳ ಪ್ರಧಾನವಾದ ಸುಳಾದಿ ಶೈಲಿಯ ಪದಗಳನ್ನು ಜನಪ್ರಿಯಗೊಳಿಸಿದರು.

'ಕರ್ನಾಟಕ ಸಂಗೀತದಲ್ಲಿ ಪುರಂದರದಾಸರು ಅದ್ವಿತೀಯರು. ಅವರು ಸು. 4,75,000 ಕೀರ್ತನೆಗಳನ್ನು ರಚಿಸಿದ್ದರೆಂಬ ಪ್ರತೀತಿ ಇದೆ. ಆದರೆ ನಮಗೆ ಈವರೆಗೆ ದೊರೆತಿರುವವು ಸು. ಒಂದು ಸಾವಿರ ಮಾತ್ರ. ವ್ಯಾಸರಾಯರು ಇವರ ಕೀರ್ತನೆ ಮತ್ತು ಪದಗಳನ್ನು "ಪುರಂಪರೋಪನಿಷತ್" ಎಂದು ಕರೆದಿದ್ದರೆ. ಪುರಂದರ ದಾಸರ ಕೀರ್ತನೆಗಳು- ಭಕ್ತಿ, ವೈರಾಗ್ಯ, ತ್ಯಾಗ, ತನ್ಮಯತೆಗಳನ್ನು ಮೈಗೂಡಿಸಿಕೊಂಡಿವೆ. ಇವರ ಪದ್ಯಗಳ ಜಾತಿ ಪದ್ದತಿ, ಶ್ರೀಮಂತ ಢಾಂಬಿಕತೆ ಅಥವ ದುಂದುಗಾರಿಗೆ, ಪ್ರಾಣಿಹಿಂಸೆ, ಭೋಗ ಜೀವನ, ಮಹಿಳೆಯರ ಮತ್ತು ಕಾರ್ಮಿಕರ ಶೋಷಣೆ ಮೊದಲಾದ ಸಾಮಾಜಿಕ ನ್ಯೂನತೆಗಳ ಮೇಲೆ ಅಪಾರ ಬೆಳಕು ಚಲ್ಲಿವೆ. ಪದ್ಯವೊಂದರಲ್ಲಿ ಪುರಂದರದಾಸರು ಹೊಲೆಯರಾರೆಂಬುದನ್ನು ಕುರಿತು ಹೇಳುತ್ತಾ "ಊರ ಹೊರಗಿರುವವರು ಮಾತ್ರ ಹೊಲೆಯರು ಊರೊಳಗಿಲ್ಲವೆ ? ಊರೊಳಗಿರುವ ಅನಾಚಾರಿಗಳೇ ಹೊಲೆಯರು," ಸಂಗೀತ ಬೋಧನೆಯನ್ನು ಸರಳ ಗೊಳಿಸಲು 'ಸಂಗೀತ ತಾಲ ಪಾಠ' ಎಂಬ ಸರಳ ಕೃತಿಯನ್ನು ರಚಿಸಿದರು. ಇಂದಿಗೂ ಕರ್ನಾಟಕ ಸಂಗೀತ ಕಲಿಯುವವರು 'ಲಂಬೋದರ ಲಕುಮಿಕರಾ,' ಕೆರೆಯ ನೀರನ್ನು ಕೆರೆಗೆ ಚೆಲ್ಲಿ,' 'ಪದ್ಮ ನಾಭ ಪರಮಪುರುಷ' ಮೊದಲಾದ ಪುರಂದರರು ರಚಿಸಿದ ಗೀತೆಗಳಿಂದಲೇ ಪ್ರಾರಂಭಮಾಡುವುದು. ಇಲ್ಲಿಯವರೆಗೂ ಕುಂಟುತ್ತಲೆ ಸಾಗಿ ಬಂದ ಕರ್ನಾಟಕ ಸಂಗೀತ ಸಂಪದ್ಭರಿತವಾಗುವಂತೆ ಮಾಡಿದವರು ದಾಸರು. ಅದರಲ್ಲೂ ಸಂಗೀತವನ್ನು ಜನಸಾಮಾನ್ಯರ ಜೀವನದ ಅಮೂಲ್ಯ ಭಾಗವನ್ನಾಗಿ ಮಾಡಿ ದವರು ಪುರಂದರದಾಸರು. ಅದುದರಿಂದಲೆ ಪುರಂದರದಾಸರನ್ನು "ಕರ್ನಾಟಕ ಸಂಗೀತ ಪಿತಾಮಹ" ನೆಂದು ಪರಿಗಣಿಸುವುದು.



Scanned with CamScanner

ಇವರ ಕೀರ್ತನೆಗಳು ಸಂಗೀತೋಪಾಸಕರಿಗೆ ಮಹಾನ್ ಸ್ಫೂರ್ತಿ ನೀಡಿದುವು. ಮಠಾಧಿಪತಿಗಳಾಗಿ ಕಾರ್ಯನಿರ್ವಹಿಸಿದ ಕೆಲವು ಹರಿದಾಸ ಪಂಥದ ಆಚಾರ್ಯರು ರಾಜ ಗುರುಗಳೂ ಆಗಿ ಅರಸರಿಗೆ ಸಲಹೆಗಳನ್ನು ನೀಡಿ ಆಡಳಿತದಲ್ಲಿ ಧರ್ಮ ನೆಲೆಗೊಳ್ಳುವಂತೆ ನೋಡಿಕೊಳ್ಳುತ್ತಿದ್ದರು. ಉದಾ: ನರಹರಿತೀರ್ಥರು ಒರಿಸ್ಸಾದ ಗಜಪತಿ ದೊರೆಯ ರಾಜ ಗುರುಗಳಾಗಿ ಮಾರ್ಗದರ್ಶನ ನೀಡಿದ್ದರು. ಶ್ರೀ ಪಾದರಾಯರು ವಿಜಯನಗರದ ಸಾಳ್ವ ನರಸಿಂಹರಾಯನ ರಾಜಗುರುಗಳಾಗಿ ಆಡಳಿತದಲ್ಲೂ ಮಾರ್ಗದರ್ಶಕರಾಗಿದ್ದರು. ವ್ಯಾಸತೀರ್ಥ ಅಥವ ವ್ಯಾಸರಾಯರು ವಿಜಯನಗರದ ಸಾಳ್ವ ಹಾಗೂ ತುಳುವ (ಕೃಷ್ಣ ದೇವರಾಯ) ಮನೆತನದ ಅರಸರಿಗೆ ಸುದೀರ್ಘಕಾಲ ರಾಜಗುರುಗಳಾಗಿದ್ದರು. ಇವರ ಕಾಲದಲ್ಲಿ ಮಾಧ್ವಮಠಗಳಿಗೆ ವಿಶೇಷ ನೆರವು ಪ್ರಾಪ್ತವಾಗಿದ್ದಿತು. ಉನ್ನತ ಹುದ್ದೆಗಳು ಕೂಡ ಅವರಿಗೆ ಪ್ರಾಪ್ತವಾಗಿದ್ದುವು. ಒಟ್ಟಾರೆ ಈ ಯತಿಗಳು ರಾಜರುಗಳ ಮೇಲೆ ಹಿಡಿತ ಉಳ್ಳವರಾಗಿದ್ದರು.

❖ **ಯಕ್ಷಗಾನ ನಾಟಕ ಕಲೆಗೆ ಕೊಡುಗೆ :** ಹರಿದಾಸ ಚಳುವಳಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಕ್ಷಗಾನ ಕಲೆಗೆ ವಿಶೇಷ ಪ್ರೋತ್ಸಾಹ ನೀಡಿತು. ಹರಿದಾಸ ಪರಂಪರೆಯ ಭಾಗವತರು ಬೈಲು ನಾಟಕ ಮತ್ತು ನೃತ್ಯ ಪ್ರದರ್ಶನಗಳನ್ನು ಬೇಸಿಗೆಯ ರಾತ್ರಿ ಸಮಯದಲ್ಲಿ ಪ್ರದರ್ಶಿಸುತ್ತಿದ್ದರು. ವಿಷ್ಣುವಿನ ದಶಾವತಾರ ಮತ್ತು ರಾಮಾಯಾಣದ ಪ್ರಸಂಗಗಳನ್ನು ಪ್ರಸ್ತುತಪಡಿಸುತ್ತಿದ್ದರು. ಈ ಪ್ರಸಂಗಗಳು ವಿಷ್ಣುವಿಗೆ ಸಂಬಂಧಿಸಿದವುಗಳಾಗಿದ್ದುವು. ಈ ಬಯಲಾಟವನ್ನು ಯಕ್ಷಗಾನ ಎಂಬ ಹೆಸರಿನಲ್ಲಿ ಜನಪ್ರಿಯ ಗೋಳಿಸಿದರು. ಯಕ್ಷರು ದೇವ ಲೋಕದ ಗಾಯಕರು, ಗಂಧರ್ವರು, ಕಿನ್ನರರು, ಕಿಂಪುರುಷರು ಕೂಡ ದೇವಲೋಕದ ಸಂಗೀತಗಾರರು. ಹರಿದಾಸರು ತಮ್ಮ ನಾಟಕ ಕಲೆಗೆ ದೈವೀ ಸ್ವರೂಪವನ್ನು ತಂದು ಕೊಡಲು ಯಕ್ಷಗಾನ ಎಂಬ ನಾಟಕ ಕಲೆಯನ್ನು ಬೆಳೆಸಿದರು. ಇದು ಕನ್ನಡ, ತುಳು, ಕೊಂಕಣಿ ಅಲ್ಲದೆ ಸಂಸ್ಕೃತ ಭಾಷೆಯಲ್ಲೂ ಪ್ರದರ್ಶನಗೊಳ್ಳುತ್ತಿತ್ತು. ಈ ಕಲೆಯಲ್ಲಿ ಕರಾವಳಿ ಮತ್ತು ಮಲೆನಾಡಿನ ಕಲಾವಿದರ ಕುಟುಂಬಗಳು ಪರಿಣತಿ ಪಡೆದಿದ್ದುವು. ಯಕ್ಷಗಾನ ನಾಟಕ ಕಲೆಗೆ, ಮಾಧ್ವ ಮಠಗಳು, ಕರಾವಳಿಯ ಸಣ್ಣಪುಟ್ಟ ರಾಜ ಮನೆತನಗಳು ಸಾಮಂತರು ಪ್ರೋತ್ಸಾಹ ನೀಡಿದರು. ದೇವಾಲಯಗಳ ಧರ್ಮದರ್ಶಿಗಳು ಕೂಡ ಯಕ್ಷಗಾನ ಕಲೆಗೆ ಪ್ರೋತ್ಸಾಹ ನೀಡಿದರು.

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR



Scanned with CamScanner